Mr. SPEAKER.—That is a different matter. The permission of absence is for those days we sit. Beyond those days permission is not necessary.

Sri V. P. DEENADAYALU NAIDU.—I just wanted to know how that Hon'ble Member has come to know that we are sitting for 20 days.

Mr. SPEAKER:—She must have expected that.

BUDGET FOR 1958-59—DEMANDS FOR GRANTS.

Demand No. 2—Land Revenue.

7. Land Revenue.

Mr. SPEAKER.—Motion moved:

"That a sum not exceeding Rs. 1,52,37,000 be granted to the Government to defray the charges which will come in course of payment during the year ending 31st day of March 1959, in respect of 'Land Revenue'."

Demand No. 32—Famine.

54. Famine.

Mr. SPEAKER.—Motion moved:

"That a sum not exceeding Rs. 52,59,000 be granted to the Government to defray the charges which will come in course of payment during the year ending 31st day of March 1959, in respect of 'Famine'."

Demand No. 45—Compensation to Zamindars.

65. Payment of Compensation to Landholders on the abolition of Zamindari System.

Mr. SPEAKER.—Motion moved:

"That a sum not exceeding Rs. 35,45,000 be granted to the Government to defray the charges which will come in course of payment during the year ending 31st day of March 1959, in respect of 'Payment of compensation to landholders, etc., on the abolition of zamindari system'."

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು)—ಮಾನ್ಯ ಅಧ್ಯಕ್ಷರೇ, ತಾವು ನನಗೆ ಈ ದಿವಸ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಮೊದಲು ತಮ್ಮನ್ನು ವಂದಿಸುತ್ತೇನೆ. ಹಳೆಯ ಮೈಸೂರಿಗೆ ಸಂಬಂಧಪಟ್ಟಹಾಗೆ ಮೈಸೂರು ದೇಶದಲ್ಲಿ ರೆವೆನ್ಯೂ ಇಲಾಖೆ ಜಾರಿಗೆ ಬಂದುದು ಮತ್ತು ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ಲ್ಯಾಂಡ್ ರೆವೆನ್ಯೂ ರೂಲ್ಸ್ ಜಾರಿಗೆ ಬಂದುದು ಸುಮಾರು 1880ನೆಯ ಇಸವಿಯಲ್ಲಿ ಎಂದು ಗೊತ್ತಾಗಿದೆ. ಆಗ ಬೊಂಬಾಯಿನಲ್ಲಿ ಜಾರಿ ಇದ್ದುದನ್ನು ನೋಡಿಕೊಂಡು ಸ್ವಲ್ಪ ಅದನ್ನನುಸರಿಸಿ ಲ್ಯಾಂಡ್ ರೆವೆನ್ಯೂ ಕೋಡ್ ಮತ್ತು ಲ್ಯಾಂಡ್ ರೆವೆನ್ಯೂ ರೂಲ್ಸ್ ಜಾರಿಗೆ ಇಲ್ಲಿ ತಂದರೆಂದು ಕೇಳಿದ್ದೇನೆ. 1888ರಲ್ಲಿ ಜಾರಿಗೆ ಬಂದ ಲ್ಯಾಂಡ್ ರೆವೆನ್ಯೂ ಕೋಡ್ ಈಚೆಗೆ ಅಲ್ಪ ಸ್ವಲ್ಪ ಬದಲಾವಣೆಯಾಗಿದೆಯೇ ವಿನಾ, ಬಾಕಿ ಎಲ್ಲಾ ಮೊದಲಿದ್ದಹಾಗೆಯೇ ಈಗಲೂ ಇದೆ. ಕಾರಣ ಸರ್ಕಾರ ನಿಧಾನವಾಗಿ ಹೋಗುತ್ತಿರುವುದು ಎಂದು ಕಾಣುತ್ತದೆ. ಇದಕ್ಕೆ ಈಗಿನ 11 ಮಂತ್ರಿಗಳೇ ಕಾರಣರೆಂದು ನಾನು ಹೇಳುವುದಿಲ್ಲ. ಕೊಂಚ ಕೊಂಚವಾಗಿ ಮೊದಲಿಂದ ಬದಲಾವಣೆಯಾಗಿದೆಯೇ ಹೊರತು ಹೆಚ್ಚಾಗಿ ಬದಲಾವಣೆಯೇನೂ ಆಗಿಲ್ಲ. ಇದರಿಂದ ಅಧಿಕಾರಿಗಳು ಒಂದೊಂದು ರೀತಿಯಾಗಿ ಲ್ಯಾಂಡ್ ರೆವೆನ್ಯೂ ಕೋಡ್ ಮತ್ತು ರೂಲ್ಸ್ ಪ್ರಕಾರ ಇಷ್ಟಾನುಸಾರವಾಗಿ ಆರ್ಡರು ಕೊಡುತ್ತಾರೆ, ಒಬ್ಬರು ಮಾಡಿದ್ದನ್ನು ಇನ್ನೊಬ್ಬರು ಮಾಡುವುದಿಲ್ಲ, ಒಬ್ಬ ಡೆಪ್ಯುಟಿ ಕಮಿಷನರು ಮಾಡಿದ್ದನ್ನು ಇನ್ನೊಬ್ಬ ಡೆಪ್ಯುಟಿ ಕಮಿಷನರು ಮಾಡುವುದಿಲ್ಲ, ಒಬ್ಬ ಡಿವಿಜನಲ್ ಕಮಿಷನರು ಮಾಡಿದ್ದನ್ನು ಇನ್ನೊಬ್ಬ ಡಿವಿಜನಲ್ ಕಮಿಷನರು ಮಾಡುವುದಿಲ್ಲ. ಹೀಗಾಗಿ ನಾನಾ ರೀತಿಯಲ್ಲಿ ಜನರಿಗೆ ತೊಂದರೆಯಾಗುತ್ತಿದೆ. ಆ ಮೇಲೆ ಲ್ಯಾಂಡ್ ರೆವೆನ್ಯೂ ಮ್ಯಾನ್ಯುಯಲ್ ತಯಾರುಮಾಡಿದರು. ಅದು ಮಾಡಿ ಸುಮಾರು 40 ವರ್ಷವಾಗಿದೆ.

ಲ್ಯಾಂಡ್ ರೆವೆನ್ಯೂ ಕೋಡ್, ಲ್ಯಾಂಡ್ ರೆವೆನ್ಯೂ ರೂಲ್ಸ್ ಮತ್ತು ಲ್ಯಾಂಡ್ ರೆವೆನ್ಯೂ ಮ್ಯಾನ್ಯುಯಲ್ ಇವೆಲ್ಲವನ್ನೂ ತಿದ್ದುಪಡಿಮಾಡಿ ಒಂದು ಅಪ್-ಟು-ಡೇಟ್ ರಾ ಮಾಡಬೇಕೆಂದು ಒಂದು ಕಮಿಟಿಯನ್ನು ರಚನೆ ಮಾಡಿದರು. ಆ ಕಮಿಟಿ ಎಲ್ಲಿ ಹೋಯಿತೋ ಸರ್ಕಾರಕ್ಕೆ ಗೊತ್ತಿದೆ. ರೆವೆನ್ಯೂ ಇಲಾಖೆಗೆ ಗೊತ್ತಿದೆ. ಲ್ಯಾಂಡ್ ರೆವಿನ್ಯೂ ಮ್ಯಾನ್ಯುಯಲ್ ಪ್ರತಿಯೊಂದು ಡೆಪ್ಯುಟಿ ಕಮಿಷನರ ಆಫೀಸಿನಲ್ಲೂ, ಸೆಬ್‌ಡಿವಿಷನ್ ಆಫೀಸರ ಆಫೀಸಿನಲ್ಲೂ, ಡಿವಿಜನ್ ಕಮಿಷನರ ಆಫೀಸಿನಲ್ಲೂ ಇದೆ. ಆದರೆ ಯಾವರೀತಿ ಲ್ಯಾಂಡ್ ರೆವೆನ್ಯೂ ರೂಲ್ಸನ್ನು ಜಾರಿಗೆ ತರಬೇಕು ಎಂಬ ವಿಷಯವೇ ಅನೇಕರಿಗೆ ಚೆನ್ನಾಗಿ ಗೊತ್ತಿಲ್ಲ. ಈ ವಿಷಯದಲ್ಲಿ ಪ್ರತಿಯೊಬ್ಬರಿಗೂ ತಿಳಿವಳಿಕೆ ಕೊಡಬೇಕು. ಅನೇಕ ಅಧಿಕಾರಿಗಳಿಗೆ ಲ್ಯಾಂಡ್ ರೆವೆನ್ಯೂ ರೂಲ್ಸ್ ವಿಷಯವೇ ಚೆನ್ನಾಗಿ ಗೊತ್ತಿಲ್ಲ. ಅವರು ಮಾಡಿದ್ದೇ ಕೆಲಸ ಹೂಡಿದ್ದೇ ಲಗ್ಗೆ.

ಶ್ರೀ ಕೆ. ಹನುಮಂತಯ್ಯ (ರಾಮನಗರಂ).—ಎಷ್ಟು ವರ್ಷಗಳಿಂದ ಆ ರೀತಿ ನಡೆದುಕೊಂಡು ಬಂದಿದೆ?

ಶ್ರೀ ಜಿ. ಎಚ್. ಪುಟ್ಟಣ್ಣ.—1888ನೇ ಇಸವಿಯಿಂದ ಬಂದುದು, ಇಷ್ಟು ವರ್ಷಗಳಾದರೂ ಈ ಬಗ್ಗೆ ಯಾರೂ ನನಗಾ ಕೊಟ್ಟಿಲ್ಲ. ಶ್ರೀ ಕೆ. ಹನುಮಂತಯ್ಯನವರು

(ಶ್ರೀ ಜಿ. ಎಸ್. ಪುಟ್ಟಣ್ಣ),

ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ಕಾಲಾವಕಾಶವೇ ಸಿಕ್ಕುತ್ತಿರಲಿಲ್ಲ. ಏಕೆಂದರೆ ಬೆಳಿಗ್ಗೆ ಆದರೆ ಅವಿಶ್ವಾಸ ನೂಚನೆ ಬರುತ್ತಿತ್ತು.

ಶ್ರೀ ಕೆ. ಹನುಮಂತಯ್ಯ.—ಬೆಳಿಗ್ಗೆ ಹೊತ್ತಲ್ಲ, ಸಾಯಂಕಾಲದ ಹೊತ್ತು ಬರುತ್ತಿತ್ತು.

ಶ್ರೀ ಜಿ. ಎಸ್. ಪುಟ್ಟಣ್ಣ.—ನಮ್ಮ ಸರ್ಕಾರ ಬರಬೇಕು. ಆಗ ಆಗುತ್ತದೆಂದು ಕಾಣುತ್ತದೆ.

ಇನ್ನೊಂದು ವಿಷಯ. ರೆವೆನ್ಯೂ ಇಲಾಖೆಯಲ್ಲಿ ರಿಡಂಡೆನ್ಸಿ ಆಫ್ ಅಕೌಂಟ್ಸ್ ಇದೆ. ಅದು ಮಂತ್ರಿಗಳಿಗೂ ಗೊತ್ತಿಲ್ಲ. ಸೆಕ್ರೆಟೇರಿಯಟ್ಟಿನವರಿಗೂ ಗೊತ್ತಿಲ್ಲ. ಶ್ಯಾನುಭೋಗರು ಅಕೌಂಟ್ಸನ್ನು ಮೊಗಮ್ಮಾಗಿ ಮೇಂಟೇನ್ ಮಾಡುತ್ತಾರೆ. ಅದೇ ರೀತಿಯಾಗಿ ಇವತ್ತು ಒಬ್ಬ ರೆವೆನ್ಯೂ ಆಫೀಸರ್ ಕೂಡ ಅಕೌಂಟ್ಸ್ ಮೇಂಟೇಕ್ ಮಾಡಬೇಕಾಗಿದೆ. ಯಾಕೆಂದರೆ ಒಂದು ತರಹ ರೂಲ್ಸ್ ಇಲ್ಲ. ಯಾವ ದಾಖಲೆಯೂ ಇರುವುದಿಲ್ಲ ಹೇಳಿದ್ದೇ ಹೇಳಿದ್ದು, ಮಾಡಿದ್ದೇ ಮಾಡಿದ್ದು. ವೇಸ್ಟ್ ಆಫ್ ಪೇಪರ್, ವೇಸ್ಟ್ ಆಫ್ ಪ್ರಿಂಟಿಂಗ್; ಅನಾವಶ್ಯಕವಾಗಿ ಲೆಕ್ಕವಿಲ್ಲದಷ್ಟು ವೇಸ್ಟ್ ಆಗುತ್ತಿದೆ. ಈಗ ರೆವೆನ್ಯೂ ರೂಲ್ಸ್‌ನಲ್ಲಿ ಫಾರಂ ನಂಬರ್ ಏಳು ಇದೆ. ಅದು ತಕರಾರು ತಃಖ್ತೆ ಬರೆಯುವ ಫಾರಂ. ಇದು ಒಂದು ಚಂದ್ರಾಯುಧವನ್ನು ಶ್ಯಾನುಭೋಗರ ಕೈಗೆ ಕೊಟ್ಟ ಹಾಗೆ ಶ್ಯಾನುಭೋಗರಿಗೆ ಕೊಟ್ಟಿದೆ. ಅನ್ಯಾಯದ ಕೇಸುಗಳೇ ಬಹಳ. ಶ್ಯಾನುಭೋಗರು ಒಬ್ಬರ ಮನೆಯನ್ನು ತೊಳೆಯಬಹುದು, ಇನ್ನೊಬ್ಬರ ಮನೆಯನ್ನು ಬದುಕಿಸಬಹುದು. ಈ ವಿಷಯಗಳಮೇಲೆ ನಮಾರು ಮೂರು ದಿವಸಗಳು ಮಾತನಾಡ ಬಲ್ಲೆ. ಮುಕ್ಕಾಲು ಘಂಟೆಯಲ್ಲಿ ಏನೂ ಮಾತನಾಡುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಒಬ್ಬ ರೈತ ಜಮೀನಿಗೋಸ್ಕರ ಅರ್ಜಿ ಹಾಕಿದರೆ, ಅವನು ಕಾಂಗ್ರೆಸ್ ಪಾರ್ಟಿಗೆ ಸೇರಿಲ್ಲ ಎಂದು ಅವನ ಅರ್ಜಿಯನ್ನು ದರಖಾಸ್ತ್ ರಿಜಿಸ್ಟರಿನಲ್ಲಿ ಎಂಟರ್ ಮಾಡುವುದಿಲ್ಲ. ಇದು ಇವತ್ತು ನಡೆಯುತ್ತಿದೆ. ದರಖಾಸ್ತು ರಿಜಿಸ್ಟರಿನಲ್ಲಿ ಪ್ರತಿಯೊಂದು ದರಖಾಸ್ತು ಅರ್ಜಿಯನ್ನು ಯಾವ ರೈತನೇ ಆಗಲಿ, ಅಥವಾ ಯಾರೇ ಕೊಟ್ಟರೂ ರಿಜಿಸ್ಟರ್ ಮಾಡಬೇಕು. ರೆವೆನ್ಯೂ ಇನ್‌ಸ್ಪೆಕ್ಟರ್ ಪರ್ಸನಲ್ ರಿಜಿಸ್ಟರಿಗೆ ಎಂಟರ್ ಆಗುವುದೇ ಇಲ್ಲ. ಅವರು ಆಫೀಸಿನಲ್ಲಿಯೇ ಕುಳಿತಿರುತ್ತಾರೆ. ದರಖಾಸ್ತು ಅರ್ಜಿಗಳು ಎಲ್ಲಿ ಮಾಯವಾಗಿ ಹೋಗುತ್ತವೆ ಎಂಬುದೇ ಗೊತ್ತಾಗುವುದಿಲ್ಲ. ಇನ್ನೊಂದು ಅವಿವೇಕವಿದೆ. ನಮ್ಮ ಸರ್ಕಾರದಲ್ಲಿ ಒಬ್ಬ ರೈತ ಒಂದು ಅರ್ಜಿಕೊಟ್ಟರೆ, ಸರ್ಕಾರದವರು ರೈತನಿಂದ ಅರ್ಜಿ ಬಂದಿದೆಯೆಂದು ಒಂದು ಅಕ್‌ನಾಲೆಡ್ಜ್‌ಮೆಂಟ್ ಸಹ ಕೊಡುವುದಿಲ್ಲ. ಈಗ ತಾನೇ ನಮ್ಮ ತುಮಕೂರು ಜಿಲ್ಲೆಗೆ ಒಬ್ಬ ಡೆಪ್ಯುಟಿ ಕಮಿಷನರು ಬಂದಿದ್ದಾರೆ. ಅವರನ್ನು ನಾನು ಇನ್ನೂ ನೋಡಿಯೇ ಇಲ್ಲ! ಅಲ್ಲಿ ಒಂದು ವಿಷಯ ತಿಳಿದು ಬಂತು. ನನಗೆ ಬಹಳ ಸಂತೋಷವಾಯ್ತು. ಅವರು ಏನು ಆರ್ಡರ್ ಮಾಡಿದ್ದಾರೆಂದರೆ ಯಾವ ಅರ್ಜಿಯೇ ಆಗಲಿ ಆಫೀಸಿಗೆ ಬಂದ ತಕ್ಷಣವೇ ಅಕ್‌ನಾಲೆಡ್ಜ್‌ಮೆಂಟ್ ಕೊಡಬೇಕು ಮತ್ತು ಪ್ರತಿಯೊಂದು ದರಖಾಸ್ತು ಅರ್ಜಿಯನ್ನು ರಿಜಿಸ್ಟರ್‌ನಲ್ಲಿ ಎಂಟರ್ ಮಾಡಬೇಕು ಎಂಬುದಾಗಿ ಆಫೀಸಿನಲ್ಲಿ ಇನ್‌ಸ್ಪೆಕ್ಷನ್ಸ್ ಕೊಟ್ಟಿದ್ದಾರಂತೆ. ಇಷ್ಟು ದಿವಸಗಳೂ ಇಲ್ಲದೇ ಇದ್ದುದು ಇವತ್ತು ಮಾಡಿದ್ದಾರೆ. ಅದೂ ಅಲ್ಲದೆ ಡೆಪ್ಯುಟಿ ಕಮಿಷನರು ಮತ್ತು ನಬ್ ಡಿವಿಜಿ ಆಫೀಸರು ಗುಬ್ಬಿತಾಲ್ಲೂಕ್ ಆಫೀಸಿಗೆ ಹೋಗಿ ಒಂದೇ ದಿವಸ ಕುಳಿತುಕೊಂಡು ನಮಾರು ನಾಲ್ಕೈದಾರು ವರ್ಷಗಳಿಂದ ಪೆಂಡಿಂಗ್ ಆಗಿದ್ದ ಮುನ್ನೂರು ಫೈಲು ಮತ್ತು ಅರ್ಜಿಗಳನ್ನು ತೀರ್ಮಾನ ಮಾಡಿದ್ದಾರಂತೆ. ಇಂತಹ ರೆವೆನ್ಯೂ ಆಫೀಸರ್‌ಗಳು ಬಂದರೆ ಈ ರೀತಿಯಾಗಿ ಕೆಲಸ ಚೆನ್ನಾಗಿ ನಡೆಯುತ್ತದೆ. ಇನ್ನೊಂದು ವಿಚಾರ ನನಗೆ ಮೊನ್ನೆ ಮೊನ್ನೆ ಗೊತ್ತಾಯಿತು. ಕೆಲವು ಸಾರಿ ದರಖಾಸ್ತು ಅರ್ಜಿಗಳು ಬಂದರೆ ಅದಕ್ಕೆ ಯಾರುಯಾರು ಸಂಬಂಧಪಟ್ಟಿದ್ದಾರೋ ಅವರು ಪ್ರತಿಫಲ ಹೊಂದಿದ ಹೊರತು ದರಖಾಸ್ತು ಡಿಸ್‌ಪೋಸ್ ಆಫ್ ಆಗುವುದಿಲ್ಲ. ಆದ್ದರಿಂದ ದರಖಾಸ್ತು ಬಂದ ದಿವಸವೇ ದರಖಾಸ್ತು ರಿಜಿಸ್ಟರ್‌ನಲ್ಲಿ ಎಂಟ್ರಿಯಾಗಬೇಕು. ಪ್ರತಿದಿವಸವೂ ದರಖಾಸ್ತು ರಿಜಿಸ್ಟರಿನಿಂದ ಎಷ್ಟು ಅರ್ಜಿಗಳು ಬಂದುವು, ಎಷ್ಟು ಅರ್ಜಿಗಳು ವಿಲೇವಾರಿ ಯಾದುವು ಎಂಬುದನ್ನು ನೋಡಬೇಕು. ಅದನ್ನು ಬಿಟ್ಟು ಪ್ರತಿಫಲವನ್ನು ನಿರೀಕ್ಷೆಮಾಡುವುದನ್ನು ಸೋಗಲಾಡಿಸಬೇಕು.

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಶಾಖೆಯ ಮಂತ್ರಿಗಳು).—ಪ್ರತಿಫಲ ಎಂದರೇನು?

ಶ್ರೀ ಜಿ. ಎಸ್. ಪುಟ್ಟಣ್ಣ.—ಪ್ರತಿಫಲ ಎಂದರೆ ಲಂಚ. ಏಕೆಂದರೆ ಈಗ ದೇಶವೆಲ್ಲಾ ಲಂಚಮಯವಾಗಿದೆ.

ದರಖಾಸ್ತಿನ ವಿಚಾರವಾಗಿ ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿ ಒಂದು ಅನಾವಶ್ಯಕರವಾದ ಮತ್ತು ಅನಾವಶ್ಯಕವಾದ ರೂಲ್ಸನ್ನು ಜಾರಿಗೆ ತಂದಿದ್ದಾರೆ. ಅದು ಪೊಲಿಟಿಕಲ್ ಸಫರರ್ಸಿಗೆ ಜಮೀನು ಕೊಡಬೇಕೆಂಬುದಾಗಿ. ಅದನ್ನು ನಾನು ಒಪ್ಪುವುದಿಲ್ಲ. ಇಂತಹ ರೂಲ್ಸನ್ನು ಮೊದಲು ತೆಗೆದುಹಾಕಬೇಕು. ಇಂಥಿಂಥ ಪಾರ್ಟಿಯವರಿಗೇ ಜಮೀನು ಕೊಡಬೇಕೆಂಬ ಪದ್ಧತಿಯನ್ನು ಸರ್ಕಾರದವರು ತಪ್ಪಿಸಬೇಕು. ಇದರಿಂದ ಯಾವೊಂದು ದೋಷಾರೋಪಣೆಗೂ ಅವಕಾಶವಿಲ್ಲ. ಈಗಾಗಲೇ ಬೇಕಾದಷ್ಟು ಜಮೀನುಗಳನ್ನು ಪೊಲಿಟಿಕಲ್ ಸಫರರ್ಸಿಗೆ ಕೊಡುತ್ತಿದ್ದಾರೆ. ಅದನ್ನು ತಪ್ಪಿಸಬೇಕು.

ಇನ್ನು ಜಮಾಬಂದಿ ವಿಷಯ. ಅಮಲ್ದಾರರ ಮುಂದೆ ಈ ಜಮಾಬಂದಿ ಲೆಖ್ಖದ ವಿವರ ಬರುತ್ತದೆ. ಪಟೇಲರು ಮತ್ತು ಶ್ಯಾನುಭೋಗರು ಸರಿಯಾಗಿ ಸಂಜೆ ಆರೂವರೆ ಘಂಟೆಗೆ ಸೇರುತ್ತಾರೆ. ಸೊಗಸಾಗಿ ಕಾಫಿ, ತಿಂಡಿಯನ್ನು ಮುಗಿಸಿಕೊಂಡು ಸಾಯಂಕಾಲ ಕುಳಿತುಕೊಂಡಮೇಲೆ ಆ ಲೆಖ್ಖಕ್ಕೆ ಅಮಲ್ದಾರರು ಸೈನ್ ಮಾಡುತ್ತಾರೆ. ನಬ್-ಡಿವಿಜಿ ಆಫೀಸರು ಮಾಡುವುದೂ ಹಾಗೆಯೇ ಮತ್ತು ಡೆಪ್ಯುಟಿ ಕಮಿಷನರು ಮಾಡುವುದೂ ಹಾಗೆಯೇ: ಹಿಂದೆ ಐದಾರು ದಿವಸಗಳು ಜಮಾಬಂದಿ ನಡೆಯುತ್ತಿತ್ತು. ಒಂದು ಪ್ರೋಗ್ರಾಂ ಇರುತ್ತಿತ್ತು. ಸಂಬಂಧಪಟ್ಟ ಗುಮಾಸ್ತರು ಸಂಬಂಧಪಟ್ಟ ಪ್ರತಿಯೊಂದು ರಿಕಾರ್ಡನ್ನೂ ತೆಗೆದುಕೊಂಡುಹೋಗಿ ಅಲ್ಲಿ ಹಾಜರಿರಬೇಕೆಂಬ ನಿಯಮವಿತ್ತು. ಪ್ರತಿಯೊಂದು ಜಾಗವನ್ನೂ ಪ್ರತಿಯೊಬ್ಬ ಆಫೀಸರೂ ಇನ್‌ಸ್ಪೆಕ್ಟ್ ಮಾಡುತ್ತಿದ್ದರು. ಫೈನಲ್ ಡಿಸಿಷನ್ ಕೊಡುತ್ತಿದ್ದರು. ಈಗ ಆಫೀಸುಗಳಿಂದ ನೋಟೀಸ್ ಕೊಡುವುದು ಒಂದು ಮಕ್ಕಳಾಟ ದೋಪಾದಿಯಲ್ಲಿದೆ. ಅದಕ್ಕೆ ಸರಿಯಾಗಿ ಸರ್ಕಾರದವರು ನಿಗಾಕೊಡುತ್ತಿಲ್ಲ. ನಾನು ಒಂದು ಕಡೆ ಪರ್ಸನಲ್, ಅಸಿಸ್ಟೆಂಟ್ ಆಗಿದ್ದೆ. ಕೆಲವು ಕಾಗದಪತ್ರಗಳು ಆರು ಏಳು ವರ್ಷಗಳಿಂದಲೂ ಇತ್ಯರ್ಥವಾಗದೆ ಪೆಂಡಿಂಗ್‌ನಲ್ಲಿದ್ದುವು. ಕಾಗದಗಳು ಆಫೀಸಿನಿಂದ ಆಫೀಸುಗಳಿಗೆ ಓಡಾಡುವುದರಲ್ಲಿಯೇ ಎಷ್ಟೋ ನಿಧಾನವಾದುದು ಗೊತ್ತಾಯಿತು. ಕಾರಣ, ಅಮಲ್ದಾರರ ಆಫೀಸಿನಲ್ಲಿರುವ ಗುಮಾಸ್ತರ ಕೈ ಬೆಚ್ಚಗೆ ಮಾಡಿದರೆ,

ಅಲ್ಲಿಂದ ಕಾಗದಪತ್ರಗಳು ಹೊರಡುತ್ತವೆ ಎಂಬುದಾಗಿ. ಆಗ ಕೆಲವು ಹೇಳಿದ್ದು ನನಗೆ ತಿಳಿದುಬಂತು. ಈ ರೀತಿಯಾಗಿ ಮಾಡಲು ಸರ್ಕಾರದವರು ಮಾಡಿರುವ ಅನ್ಯಾಯವೇ ಕಾರಣ. ಅಲ್ಲಿನ ಗುಮಾಸ್ತರಿಗೆ ಕೊಡುವ ಸಂಬಳ ಬಹಳ ಕಡಮೆ. ದೊಡ್ಡ ದೊಡ್ಡ ಆಫೀಸರಿಗೆ ಮೂರು ನಾಲ್ಕು ಸಾವಿರ ರೂಪಾಯಿಗಳ ಸಂಬಳವನ್ನು ಕೊಡುತ್ತಾರೆ. ಜೀಪುಗಳನ್ನೂ, ವ್ಯಾನುಗಳನ್ನೂ ಕೊಡುತ್ತಾರೆ. ಇಪ್ಪತ್ತು ಮೂವತ್ತು ಸಾವಿರ ರೂಪಾಯಿಗಳ ಕಾರುಗಳನ್ನು ಕೊಡುತ್ತಾರೆ. ಆದರೆ ಬಡ ನೌಕರರಿಗೆ ಟಿ.ಎ. ಇಲ್ಲ, ಸಂಬಳವೂ ಸರಿಯಾಗಿಲ್ಲ. ಇಂಟಿಗ್ರೇಷ್ ಆದಮೇಲೆ ಬಡ ನೌಕರರ ಸ್ಥಿತಿಗತಿಗಳು ಮುಂಗಾರಿನಲ್ಲಿ ಗಾಳಿ ಬೀಸಿದರೆ ಯಾವರೀತಿಯಲ್ಲಿ ಮಾವಿನಕಾಯಿಗಳು ಚೆಲ್ಲಾಪಿಲ್ಲಿಯಾಗಿ ಉದುರುತ್ತವೋ ಆ ರೀತಿಯಾಗಿ ಆಗಿವೆ, ಬಡ ನೌಕರರ ಕಷ್ಟ ಸ್ಥಿತಿಗತಿಗಳು. ಹೆಚ್ಚಿಗೆ ಸಂಬಳ ತೆಗೆದುಕೊಂಡು ಇಪ್ಪತ್ತು ಮೂವತ್ತು ಸಾವಿರ ರೂಪಾಯಿಗಳ ಕಾರಿನಲ್ಲಿ ತಿರುಗಾಡುವವರಿಗೆ ಅಷ್ಟಾಗಿ ಗೊತ್ತಾಗುವುದಿಲ್ಲ. ರೆವಿನ್ಯೂ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಇದನ್ನೆಲ್ಲಾ ಕೂಲಂಕಷವಾಗಿ ಪರ್ಯಾಲೋಚನೆ ಮಾಡಬೇಕು ಎಂದು ನಾನು ಹೇಳುತ್ತೇನೆ. ತುಮಕೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಹತ್ತು ಹನ್ನೆರಡು ವರ್ಷಗಳಿಂದ ಬಹಳ ಬುದ್ಧಿವಂತರಾದ ಗುಮಾಸ್ತರುಗಳು ಇದ್ದಾರೆ. ಮಂತ್ರಿಗಳ ಹಿಂದೆ ಹೇಗೆ ಓಡಾಡಬೇಕು ಎನ್ನುವುದು ಅವರಿಗೆ ಗೊತ್ತಿದೆ. ಅಂಥವರಿಗೆ ಪ್ರೊಮೋಷನ್ ಕೊಟ್ಟು ಇಟ್ಟಿದ್ದಾರೆ. ಫಸ್ಟ್ ಮತ್ತು ಸೆಕೆಂಡ್ ಡಿವಿಜ಼್ ಕ್ಲಾರ್ಕುಗಳನ್ನು ರಿಜ಼್ರೆಂಚ್‌ಮೆಂಟ್ ಪಾಡಿದ್ದಾರೆ. ಎಲ್ಲ ಬಹಳ ಅನ್ಯಾಯ ನಡೆಯುತ್ತಾ ಇದೆ. ಗ್ರೇಡೇಷನ್ ಲಿಸ್ಟ್ ಪ್ರಕಾರ ಪ್ರೊಮೋಷನ್ ಕೊಡಬೇಕಾದುದು ನ್ಯಾಯ. ಜಾತಿ, ಮತ, ಕುಲ ನೋಡಿ ಕೊಡುವುದು ಬೇಡ. ದಯವಿಟ್ಟು ಮಂತ್ರಿಗಳು ತಕ್ಷಣ ತುಮಕೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ ಪರಿಶೀಲನೆ ಮಾಡಬೇಕು ಎಂದು ನಾನು ಸೂಚಿಸುತ್ತೇನೆ.

ಮೈಸೂರು ದೇಶದಲ್ಲಿ ಯಾವದೇ ಕೆಲಸ ನಡೆಯಬೇಕಾದರೂ ಅದರಲ್ಲಿ ಅಮಲ್‌ದಾರರು ಡೆಪ್ಯುಟಿ ಕಮಿಷನರರು ಇರಲೇಬೇಕು. ಅಮಲ್‌ದಾರರು ಕೇವಲ ಬಿಲ್ ಕಲೆಕ್ಟರ್ ಆಗಿದ್ದಾರೆ. ಇಂಥ ಒಂದು ಅನಹ್ಯ ಸ್ಥಿತಿ ಅವರಿಗೆ ಉಂಟಾಗಿದೆ. ಈಗ ಇರತಕ್ಕಂಥ ಕೆಲವು ಅಮಲ್‌ದಾರರನ್ನು ನೋಡಿದರೆ ಅನಹ್ಯವಾಗುತ್ತದೆ. ರೆವಿನ್ಯೂ ಡಿಪಾರ್ಟ್‌ಮೆಂಟು ಹಾಳಾಗಿ ಹೋಗುತ್ತಾ ಇದೆ. ಅನುಭವಿಗಳಾದವರನ್ನು ನೇಮಕ ಮಾಡಬೇಕು. ಅಮಲ್ದಾರರನ್ನು ಕೇವಲ ಬಿಲ್ ಕಲೆಕ್ಟರನ್ನಾಗಿ ಮಾಡಿದುದು ಬಹಳ ಕೆಟ್ಟಪದ್ಧತಿಯಾಗಿದೆ. ಕಂದಾಯ ವಸೂಲಿ ಸರಿಯಾಗಿ ಆಗುತ್ತಿಲ್ಲ. ಕಂದಾಯ ವಸೂಲಿಗಾಗಿ ಫೆಬ್ರುವರಿ ಮಾರ್ಚಿ ತಿಂಗಳಲ್ಲಿ ನೋಟೀಸ್ ಕೊಡುತ್ತಾರೆ. ಟಾಂ ಟಾಂ ಮಾಡುವುದಿಲ್ಲ. ನೋಟೀಸ್ ಕೊಟ್ಟನಂತರ ಹಣ ವಸೂಲಾಗದಿದ್ದರೆ ಶೇಕಡಾ ಅರರಂತೆ ಬಡ್ಡಿ ವಸೂಲು ಮಾಡುತ್ತಾರೆ. ಬಡವರು ಸಾಲ ತಂದು ಕಂದಾಯ ಕೊಡುತ್ತಾರೆ. ಸಾಲ ತಂದ ಹಣದ ಮೇಲೆ ಶೇಕಡ 12 ರಿಂದ 18ರವರೆಗೆ ಬಡ್ಡಿ ಕೊಡಬೇಕಾಗುವುದು. "ಕಡಾ ತಂದು ಬಡವ ಕೆಟ್ಟ" ಎಂದ ಹಾಗೆ ಆಗಿದೆ. ಆದರೆ ಐನೂರು-ಸಾವಿರ ರೂಪಾಯಿಗಳವರೆಗೆ ಕಂದಾಯ ಕೊಡತಕ್ಕವರು ಶೇಕಡಾ ಅರರಂತೆ ಬಡ್ಡಿಯಮೇಲೆ ಹಣ ಉಪಯೋಗಿಸಲು ಬರುವುದೆಂದು ಕಂದಾಯ ಕೊಡುವುದಿಲ್ಲ. ಇದು ಬಹಳ ದೊಡ್ಡ ತಪ್ಪು. ಆದುದರಿಂದ ಫೆಬ್ರುವರಿ ತಿಂಗಳಿನಲ್ಲಿ ಟಾಂ ಟಾಂ ಹೊಡಿಸಬೇಕು. ಫೆಬ್ರುವರಿ 20ನೆಯ ತಾರೀಖಿನಿಂದ ಮಾರ್ಚಿ 20ನೇ ತಾರೀಖಿನವರೆಗೆ ಸ್ಪೆಷಲ್ ನೋಟೀಸ್ ಕೊಡಬೇಕು. ಏಪ್ರಿಲ್ ಮತ್ತು ಮೇ ತಿಂಗಳುಗಳೊಳಗೆ ಕಂದಾಯ ಕೊಡದೇ ಇದ್ದರೆ ಜಮೀನು automatic ಆಗಿ forfeit ಮಾಡುತ್ತೇವೆಂದು ತಿಳಿಸಬೇಕು. ಈ ರೀತಿಯಾಗಿ ಕಂದಾಯ ಕೊಡವೆ ಇದ್ದವರ ಜಮೀನನ್ನು automatic ಆಗಿ forfeit ಮಾಡಬೇಕು. ಹಾಗೂ ಸರಿಯಾಗಿ ಕಂದಾಯ ವಸೂಲು ಮಾಡದೇ ಇದ್ದರೆ ಅಮಲ್ದಾರರಿಗೆ ಕೊಡತಕ್ಕ Special Pay 50 ರೂಪಾಯಿ ನಿಲ್ಲಿಸಬೇಕು. ಹೀಗೆ ಆದರೆ ಕಂದಾಯ ವಸೂಲು ಸರಿಯಾಗಿ ಆಗುತ್ತದೆ, ಇಲ್ಲದೇ ಹೋದರೆ ಆಗುವುದಿಲ್ಲ.

Make the rules clear. Give them a chance to work properly and see that the ryots are not ruined by the dirty rules in existence in Mysore State. I say they are dirty because they are not clear. They are making every officer go astray.

ಸ್ವಾಮಿ; ಮತ್ತೊಂದು ವಿಷಯ ಹೇಳಬೇಕಾಗಿದೆ. ಶಿವಮೊಗ್ಗಾ ತಾಲ್ಲೂಕಿನಲ್ಲಿ ಸರಕಾರಿ ಜಮೀನನ್ನು ತೆಗೆದುಕೊಂಡು ಸಾಗುಮಾಡಿ ಫಸಲು ತೆಗೆದುಕೊಂಡು ಕಾಗದದಲ್ಲಿ ಮಾತ್ರ ಇದು ಬಂಜರು ಭೂಮಿಯಾಗಿದೆಯೆಂದು ಬರೆದು ಕಂದಾಯ ಕೊಡದೆ ಇರತಕ್ಕ ಉದಾಹರಣೆಗಳು ಇವೆ. ಯಾವದೇ ಸರಕಾರ ಅಧಿಕಾರಿಯು ಸರಿಯಾದ ನಿಗಾ ಈ ವಿಷಯದಲ್ಲಿ ಇಲ್ಲ. ಯಾರೂ ನೋಡುತ್ತಿಲ್ಲ. ಶ್ಯಾನುಭೋಗರು ಷರೀಕು; ರೆವಿನ್ಯೂ ಇನ್‌ಸ್ಪೆಕ್ಟರ್ ನೋಡುವುದಿಲ್ಲ, ಅಮಲ್ದಾರರು ಕೇವಲ ಬಿಲ್ ಕಲೆಕ್ಟರ್ ಆಗಿದ್ದಾರೆ. Sub-Divisional Officers are superfluous Officers ಆದುದರಿಂದ ಲ್ಯಾಂಡ್ ರೆವಿನ್ಯೂ ಕಲೆಕ್ಷನ್ ರೂಲ್ಸನ್ನು ಜಾಗ್ರತೆಯಾಗಿ ಸುಧಾರಿಸಬೇಕು.

ಈ ರೀತಿಯಾಗಿ ಅಮಲ್ದಾರರನ್ನು ಬಿಲ್ ಕಲೆಕ್ಟರನ್ನಾಗಿ ಮಾಡಿದ್ದೀರಿ. B.D.O.ಅವರಿಗೆ ಜೀಪ್ ಕೊಟ್ಟಿದ್ದೀರಿ. ಒಬ್ಬ ಅಮಲ್ದಾರನ ಕೆಲಸವನ್ನು ಹತ್ತು B.D.O.ಗಳಿಗೆ ಮಾಡಲು ಆಗುವುದಿಲ್ಲ. ಒಬ್ಬ ಡೆಪ್ಯುಟಿ ಕಮಿಷನರ್ ಕೆಲಸವನ್ನು ಹತ್ತು ಹದಿನೈದು ಅಮಲ್ದಾರರಿಗೆ ಮಾಡಲು ಆಗುವುದಿಲ್ಲ. N.E.S. ಮುಂತಾದ ಎಲ್ಲ ಕೆಲಸವನ್ನು ಒಬ್ಬರಿಗೇ ಕೊಡಲಾಗಿದೆ. ಈ ಬಿಲ್ ಕಲೆಕ್ಟಿಂಗ್ ಕೆಲಸ ಬಿಡಿಸಿ ಉಳಿದ ಕೆಲಸ ಕೊಡಬೇಕು. ಆಗ ಕೆಲಸ ಸರಿಯಾಗಿ ಮಾಡಲು ಅವಕಾಶವಾಗುತ್ತದೆ. ಈಗ ಯಾವ ತಾಲ್ಲೂಕಿಗೆ ಹೋಗಲಿ ಅಲ್ಲಿ ವಶೀಲಿಬಾಜಿ ವಿಪರೀತವಾಗಿದೆ. ಪುಢಾರಿಗಳ ಹಾವಳಿ ಜಾಸ್ತಿಯಾಗಿದೆ. ಇವರು ಕಾಂಗ್ರೆಸ್ಸಿನಲ್ಲಿ ಇರತಕ್ಕಂಥವರು ಎಂದು ನಾನು ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್ (ಚಳ್ಳಕೆರೆ).— ಕಾಂಗ್ರೆಸ್ಸಿನಲ್ಲಿ ಇರತಕ್ಕಂಥ ಜನರು ಎಂದು ಅವರು ಹೇಳಿದರು.

This kind of thing should not be allowed. We have no objection to his commenting on the administration. He has no business to say anything against the Congress which is not represented here. At this rate, take it from me, there will not be any end at all.

ಅಧ್ಯಕ್ಷರು.—ಕಾಂಗ್ರೆಸ್ ಜನರು ಅಂದರೆ ಅರ್ಥ ಬೇರೆ ಆಗುತ್ತದೆ. ಹೊರಗಡೆ ಇದ್ದವರು ಅದರಲ್ಲಿ ಬರಬಹುದು. ಕಾಂಗ್ರೆಸ್ ಎಂ.ಎಲ್.ಎ. ಎಂದು ಹೇಳಿದರೆ ಪರವಾಯಿಲ್ಲ. ಸದಸ್ಯರು ಹಾಗೆ ಹೇಳಬಹುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಕುಂಬಳಕಾಯಿ ಕಳ್ಳ ಎಂದರೆ ಹೆಗಲು ತಟ್ಟಿಕೊಂಡ ಎಂದ ಹಾಗೆ ಮಾನ್ಯ ಸದಸ್ಯರಿಗೆ ಆಗಿದೆ. ಕಾಂಗ್ರೆಸ್ಸಿನಲ್ಲಿದ್ದವರು ಎಂದು ಹೇಳಿದೆ. ಯಾರಿಗೂ ದೋಷಾರೋಪಣೆ ಮಾಡಬೇಕೆಂದು ಹೇಳುವುದಿಲ್ಲ. ಏನೇ ಆದರೂ ನಮ್ಮ ಶ್ರೀ ಭೀಮಪ್ಪನಾಯಕರು ನನಗೆ ಸ್ನೇಹಿತರು. ನಾನೂ ಅವರೂ ಕಾಸ್ಟ್‌ಮೇಟ್ಸ್. ಈ ಸಭೆಯಲ್ಲಿ ಮಾತ್ರ ನಮಗೆ ವಿರೋಧವಾಗಿರುವ ಪಕ್ಷದಲ್ಲಿದ್ದಾರೆ.

1-30 P.M.

ಭೀಮಪ್ಪನಾಯಕರ ಮೇಲಾಗಲಿ, ಇನ್ನಾರ ಮೇಲಾಗಲಿ ವೈಯಕ್ತಿಕವಾಗಿ ನಾನು ಹೇಳುತ್ತಿಲ್ಲ. ಈ ರೀತಿ ಮಾಡುವುದರಿಂದ ಕೆಲಸ ಆಗುವುದಿಲ್ಲ ಎಂದು ಹೇಳಿದೆ ಅಷ್ಟೆ. ಯಾರನ್ನಾದರೂ ಕೇಳಿ, ಗೊತ್ತಾಗುತ್ತದೆ.

ಪಟೇಲ ಶ್ಯಾನುಭೋಗರ ಸ್ಥಿತಿ ಹೇಗಿದೆ ಎಂದರೆ, ಅವರು ಕೇವಲ ನಾಲಾಯಕ್ಕಾಗಿದ್ದಾರೆ. ಅವರಿಗೆ ಸಂಬಳ ಸಾರಿಗೆ ಕೊಡುತ್ತೇವೆ ಎನ್ನುತ್ತೀರಿ. ಆದರೆ ಆ ರೀತಿ ಕೊಡಲು ಕ್ರಮ ತೆಗೆದುಕೊಂಡಿಲ್ಲ. ಅವರು ಏನು ಮಾಡುತ್ತಾರೆ? ರೈತನ ತಲೆ ಒಡೆಯುವ ಕೆಲಸ ಮಾಡುತ್ತಾರೆ. ಯಾರೋ ಅಮಲ್ದಾರರು ಜಮಾಬಂದಿ ಮಾಡುವಾಗ ಒಬ್ಬ ಶಾನುಭೋಗರಿಗೆ 2 ರೂಪಾಯಿ ಜುಲ್ಮಾನೆ ಹಾಕಿದ್ದೇನೆ ಎಂದು ಹೇಳಿದರಂತೆ. ಅದಕ್ಕೆ ಅವನು, 'ಬಡ ರೈತ ಕೆಟ್ಟುಹೋಗುತ್ತಾನೆ' ಸ್ವಾಮಿ, ಹಾಕಬೇಡಿ, ಎಂದನಂತೆ. ಈ ರೀತಿ ಆಗುತ್ತದೆ. ಇದು ಒಳ್ಳೆಯದಲ್ಲ.

ಆರ್. ಆರ್. ಅಕೌಂಟ್ಸ್ ಎನ್ನುವುದು ಮೈಸೂರು ದೇಶದಲ್ಲಿ ಸುಮಾರು 23 ತಾಲ್ಲೂಕುಗಳಲ್ಲಿ ಸರಿಯಾಗಿರಬಹುದು. ಇನ್ನೆಲ್ಲಾ ಸರಿಯಾಗಿಲ್ಲ. ಒಬ್ಬ ಅಮಲ್ದಾರರೂ ಕೂಡ ಅದರಮೇಲೆ ನಿಗಾ ಕೊಡುವುದಿಲ್ಲ. Inspection Notes—ಅದರಮೇಲೆ Yes-No-ಎಂದು ಪ್ರಿಂಟ್ ಮಾಡಿರುತ್ತಾರೆ—ಅದನ್ನು ಗುಮಾಸ್ತರು ಭರ್ತಿಮಾಡಿ ಕೊಟ್ಟಿದ್ದಕ್ಕೆ ಆಫೀಸರುಗಳು ಸೈನ್ ಹಾಕುತ್ತಾರೆ. ಸಬ್-ರಿಜಿಸ್ಟ್ರಾರ್ ಆಫೀಸಿನಿಂದ ಆರ್. ಆರ್. ಪಟ್ಟಿ ರಿಜಿಸ್ಟರ್ ಆಗಿದ್ದು ತಕ್ಷಣ ಬಂದರೂ ಸಹ ಅವನ್ನು enter ಮಾಡುವುದಿಲ್ಲ. ತಾಲ್ಲೂಕು ಆಫೀಸು, ಡೆಪ್ಯುಟಿ ಕಮೀಷನರ ಆಫೀಸಿನಲ್ಲಿ ರಿಕಾರ್ಡ್ ಕ್ಲರ್ಕನ್ನು ತಿಂಗಳು-ಎರಡು ತಿಂಗಳಿಗೊಮ್ಮೆ ಬದಲಾಯಿಸುತ್ತಾರೆ. ನಾಲ್ಕು ಐದು ವರ್ಷಕ್ಕೆ ಕಡಮೆ ಯಾರನ್ನೂ ಬದಲಾಯಿಸಬಾರದು. ಈ ರೀತಿ ಆಗಾಗ್ಗೆ ಬದಲಾಯಿಸುವುದರಿಂದ ಬಹಳ ಅನಾನುಕೂಲ ಇದೆ. ಪಹಣಿ ಲೆಬ್ಬಗಳನ್ನು ಬದಲಾಯಿಸುತ್ತಾರೆ. ಪ್ರತಿಯೊಂದು ಪಟ್ಟಿಗೂ ಜಮಾಬಂದಿ ಕಾಲದಲ್ಲಿ ಆಫೀಸರು ರುಜು ಹಾಕಿರಬೇಕೆಂದು ಇದೆ. ಆಗಾಗ್ಗೆ ಪುಟಕ್ಕೆ ಪುಟ ಸಹ ಬದಲಾಯಿಸಿರುತ್ತಾರೆ. ಆದ್ದರಿಂದ ಈ ರೆಕಾರ್ಡ್ ಸಿನ್ಹಂನ್ನ ಪೂರ್ತಿಯಾಗಿ ತನಿಖೆ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಸರ್ವೇ ಸೆಟ್ಲ್‌ಮೆಂಟ್ ವಿಷಯ. ರೆವಿನ್ಯೂ ಮಿನಿಸ್ಟರಿಗೆ ಆಶ್ಚರ್ಯವಾಗಬಹುದು. 1890ನೆಯ ಇಸ್ವಿಗೆ ಹಿಂದೆ ತೀರ್ಥಹಳ್ಳಿ ತಾಲ್ಲೂಕು ಭೀಮನಕಟ್ಟೆ ಮಜಕ್ಕೆ ಸಾವಿರ ಎಕರೆ ಜಮೀನು ಕೊಟ್ಟಿದ್ದಾರೆ. ಇವತ್ತಿನವರೆಗೂ ಸರ್ವೇ ಸೆಟ್ಲ್‌ಮೆಂಟ್ ಆಗಿಲ್ಲ. ಸಾವಿರಾರು ಗಂಧದ ಮರಗಳು ಹೊರಟುಹೋಗಿವೆ. ಜಾಗ್ರತೆ ಅಲ್ಲಿ ಸರ್ವೇ ಸೆಟ್ಲ್‌ಮೆಂಟ್ ಮಾಡಿಸಬೇಕು. ಸಾಮಾನ್ಯವಾಗಿ 45-46 ವರ್ಷಗಳಾದಾಗ್ಯೂ ಸರ್ವೇ ಸೆಟ್ಲ್‌ಮೆಂಟ್ ಆಗದೇ ಇರುವುದು ಇದ್ದರೆ, ಏಕೆ ಆ ಇಲಾಖೆಯನ್ನು ಇಟ್ಟಿರಬೇಕು? ಸರ್ವೇ ಆಗದಿರುವುದಕ್ಕೆ ಕಾರಣ ಇಷ್ಟೆ. ಆರ್. ಆರ್. ಸರ್ವೇಗೆ ಹೋದರೆ ಸರ್ವೇಯರ್‌ಗೆ ಒಂದು ನಂಬರಿಗೆ ಎಂಟು ಆಣೆ ಕಮೀಷನ್ ಕೊಡುತ್ತಾರೆ. ಬಾಕಿಯುದಕ್ಕೆ ಏನೂ ಕೊಡುವುದಿಲ್ಲ. ಇಂಥ ಕಡೆ ಆರ್. ಆರ್. ಸರ್ವೇ ಮಾಡುತ್ತೇನೆ ಎಂದು ಪ್ರೋಗ್ರಾಂ ಹಾಕುತ್ತಾನೆ. ಅಲ್ಲಿಗೆ ಹೋದಾಗ R.R. Phodi ಮಾತ್ರ ಮಾಡುತ್ತಾನೆಯೇ ಹೊರತು L. R. Phodi ಸರ್ವೇ ಮಾಡುವುದಿಲ್ಲ. ಸರ್ವೇ ಡಿಪಾರ್ಟ್‌ಮೆಂಟ್ ಹೀನಸ್ಥಿತಿಗೆ ಬಂದಿರುವಷ್ಟು ಇನ್ನಾವ ಡಿಪಾರ್ಟ್‌ಮೆಂಟೂ ಬಂದಿಲ್ಲ ಎಂದು ಹೇಳುತ್ತೇನೆ. ಮಾನ್ಯ ರೆವಿನ್ಯೂ ಮಿನಿಸ್ಟರು ಗಮನಕೊಟ್ಟು ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

[SRI M. MALLIKARJUNASWAMY in the Chair]

ಅಮಲ್ದಾರರ ಕೆಲಸ ಎನ್ನುವುದು, ಪವಿತ್ರವಾದ ಕೆಲಸ. ವಿಲೇಜ್ ಪಂಚಾಯ್ತಿ ಕೆಲಸದಲ್ಲಿ ಪ್ರತಿಯೊಂದೂ ಪುಡಾರಿಗಳ ಇಂಟರ್‌ಫಿಯರೆನ್ಸ್‌ನಿಂದ ನಡೆಯುತ್ತಾ ಇದೆ. ಇದು ಹೇಗೆ ಎಂದರೆ ಒಂದು ಗ್ರಾಮದಲ್ಲಿ ಒಂದು ರಸ್ತೆ ಮಾಡಬೇಕು; ಅದಕ್ಕಾಗಲೇ ಒಬ್ಬ ಪುಡಾರಿ ಮುಂದೆ ಬಂದು ಮಣ್ಣು ಹಾಕುತ್ತಾನೆ. ಮನೆ ಕಟ್ಟಲು ರೈಸೆಸ್ ಇರುವುದಿಲ್ಲ; ಏನೂ ಇಲ್ಲ. ಇನ್ನೊಂದು ವಿಷಯ, ನ್ಯಾಯಾ. ನ್ಯಾಯಾಧಿಪತ್ಯದಲ್ಲಿ ದುಡ್ಡಿಲ್ಲ ಎಂದು ಒಬ್ಬಾಧ್ಯಾಪಕರು ಹೇಳುತ್ತಿದ್ದರು. ಈ ಸಬ್-ಡಿವಿಜನ್ ಆಫೀಸರ ಕೆಲಸ, ಕೆಲಸಕ್ಕೆ ಬಾರದ ಕೆಲಸ ಎಂದು ನಾನು ಹೇಳುತ್ತೇನೆ. ಡೆಪ್ಯುಟಿ ಕಮೀಷನರೇ ಆ ಕೆಲಸವನ್ನು ಸುಖವಾಗಿ ಹಾಯಾಗಿ ನಿಂತುಕೊಂಡು ಮಾಡಿಸಬಲ್ಲರು. ಆದ್ದರಿಂದ ಆ ಹುದ್ದೆಯನ್ನು ತೆಗೆದು ಹಾಕಬೇಕು. ಡಿವಿಜನಲ್ ಕಮೀಷನರು ಎಂದು ಹೇಳಿ ಹೊಸದಾಗಿ ಒಂದು ಹುದ್ದೆ ಮಾಡಿದ್ದೀರಿ. ಮೊದಲು ರ್ಯಾಂಡ್ ರೆವಿನ್ಯೂ ಅಪೆರೇಟ್ ಟ್ರಿಬ್ಯುನಲ್ ಮಾಡುವಾಗ ಡಿವಿಜನಲ್ ಕಮೀಷನರಿಗೆ ಆಫೀಲು ಕೆಲಸವನ್ನು ಕೊಡುವುದಿಲ್ಲ ಎಂದು ಇದೇ ಅಸೆಂಬ್ಲಿಯಲ್ಲಿ ಹೇಳಿದಿರಿ. ಈಗ ರ್ಯಾಂಡ್ ರೆವಿನ್ಯೂ ಅಪೆರೇಟ್ ಟ್ರಿಬ್ಯುನಲ್‌ನ ಅನೇಕ ಕೇಸುಗಳನ್ನು ಅವರಿಗೆ ಟ್ರಾನ್ಸ್‌ಫರ್ ಮಾಡಿದ್ದೀರಿ. ಇದು ಯಾವ ರೀತಿ ಪ್ರಕಾರ ಮಾಡಿದಿರೋ ಗೊತ್ತಿಲ್ಲ. ಕೆಲವು ಡಿವಿಜನಲ್ ಕಮೀಷನರು 'It is against law' ಎಂದು ಹೇಳಿ ವಾಪಸು ಕಳುಹಿಸಿದರು. ಈ ಬಿಕ್ಕಟ್ಟು-ಮುಗ್ಗಟ್ಟಿನಿಂದ ನಾನು ಕಂಡಹಾಗೆ ಎರಡು-ಮೂರು ವರ್ಷಗಳಿಂದ ಕೆಲವು ಕೇಸುಗಳು ತೀರ್ಮಾನವಾಗದೆ ಹಾಗೆಯೇ ಇದೆ. ಡಿವಿಜನಲ್ ಕಮೀಷನರ ಹುದ್ದೆಯಿಂದ ಜನರಿಗೆ ಕಷ್ಟವಾಗುತ್ತದೆ ಮತ್ತು ಸಬ್‌ಡಿವಿಜನ್ ಆಫೀಸರ ಹುದ್ದೆಯಿಂದ ದೇಶಕ್ಕೆ ನಷ್ಟವಾಗುತ್ತದೆ ಎಂದು ಹೇಳುತ್ತೇನೆ. ಅಮಲ್ದಾರರು, ಡೆಪ್ಯುಟಿ ಕಮೀಷನರವರು, ಸೆಕ್ರೆಟರಿ ಇಷ್ಟು ಜನರಿದ್ದರೆ ಸಾಕು. ಅಮಲ್ದಾರರು, ಸಬ್‌ಡಿವಿಜನ್ ಆಫೀಸರು, ಡೆಪ್ಯುಟಿ ಕಮೀಷನರು, ಡಿವಿಜನಲ್ ಕಮೀಷನರು ಈ ರೀತಿ ಪ್ರತಿಯೊಬ್ಬ ಅಧಿಕಾರಿಗಳ ಮೂಲಕ ಒಂದು ಕ್ರಾಗದ ಹೋಗಿ ಕೊನೆಗೆ ಒಂದು ಆರ್ಡರ್ ಆಗಬೇಕಾದರೆ ಆ ಮನುಷ್ಯನಿಗೆ ಕುಬೇರನಷ್ಟು ಹಣ ಇರಬೇಕು, ಅಂಜನೇಯನಷ್ಟು ಆಯಸ್ಸು ಇರಬೇಕು. ಇದರಿಂದ ರೈತರಿಗೆ ಬಹಳ ತೊಂದರೆ. ಇದಕ್ಕೆ ಕಾರಣವೇನೆಂದರೆ, ಸರಿಯಾದ ತಾಖತ್ತು ಇರುವ ಆಫೀಸರು ಇಲ್ಲದೆ ಇರುವುದೇ ಆಗಿದೆ. ತುಮಕೂರು ಜಿಲ್ಲೆಗೆ ಒಬ್ಬ ಡೆಪ್ಯುಟಿ ಕಮೀ

ಷನರು ಬಂದಿದ್ದಾರೆ. ಅದೇ ರೀತಿ ಪ್ರತಿಯೊಬ್ಬರೂ ಮಾಡುತ್ತಾರೆ ಎಂದು ಅಲ್ಲ. ಇವತ್ತಿನವರೆಗೂ ಅವರ ಮುಖ ನಾನು ನೋಡಿಲ್ಲ; ಅವರ ಜಾತಿ, ಕುಲ ಒಂದೂ ವಿಚಾರಿಸಿಲ್ಲ. ಅವರು ಮಾಡಿರತಕ್ಕ ಕೆಲಸ, ಅದ್ಭುತವಾದ ಕೆಲಸ ಮಾಡಿದ್ದಾರೆ ಎಂದು ಕೇಳಿದ್ದೇನೆ.

ಫ್ಯಾಮಿನ್ ವಿಚಾರ ಹಿಂದೆ ಹೇಳಿದ್ದೇನೆ. ನಮ್ಮ ಸರ್ಕಾರ ಹಗಲು ಕಂಡ ಬಾವಿಯಲ್ಲರಾತ್ರಿ ಬಿದ್ದಹಾಗೆ ಇದೆ. ಕ್ಷಾಮ ನಿವಾರಣೆಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರೋ ಗೊತ್ತಾಗುವುದಿಲ್ಲ. ಬಂಗಾಳದ ಕ್ಷಾಮ ಬಂದಾಗಿನಿಂದ ಇವತ್ತಿನವರೆಗೂ ಅದನ್ನು ಯಾವ ರೀತಿ ತಡೆಗಟ್ಟಬೇಕು ಎನ್ನುವುದು ಸರ್ಕಾರಕ್ಕೆ ಗೊತ್ತಾಗಿಲ್ಲ. ವ್ಯವಸಾಯದ ಮಂತ್ರಿಗಳಿಗೆ ಹೇಳಿದೆ, 'ಪ್ರತಿಯೊಂದು ನದಿಯ ಪಕ್ಕದಲ್ಲೂ ಒಂದು ಕಡೆ ಎರೆ ಕ್ಯಿಕ್ ರೈನು ಹಾಕಿ, ಜನಗಳು ತಾವೇ ಮುಂದೆ ಬರುತ್ತಾರೆ' ಎಂದು. ಇವತ್ತು ತುಮಕೂರು ಜಿಲ್ಲೆಯಲ್ಲಿ 25-30 ಅರ್ಜಿಗಳು ಬಂದಿವೆ. 50 ಸಾರಿ ರಿಮೈಂಡರ್ ಕೊಟ್ಟರೂ ಕೇಳುವವರೇ ಇಲ್ಲ. ಐದು-ಆರು ಸಾವಿರ ರೂಪಾಯಿ ಖರ್ಚುಮಾಡಿ ಬಾವಿ ಕಟ್ಟಿದ್ದಾರೆ. ಎದ್ಯುಚ್ಛಕ್ತಿ ಕೊಡಿ ಎಂದರೆ ಎರಡು ಮೈಲಿಗೆ ಕೊಡುತ್ತಾರೆ. ಆಚೆಗೆ ಒಂದು ಮೈಲಿ ಕೇಳಿದರೂ ಕೊಡುವುದಿಲ್ಲ. ನಾನು ಯಾರೊಬ್ಬರ ಮೇಲೂ ಆರೋಪಣೆ ಮಾಡುತ್ತಿಲ್ಲ. ಇರತಕ್ಕ ವಿಷಯ ಹೇಳುತ್ತಿದ್ದೇನೆ. 20-30 ಬಾವಿಗಳನ್ನು ತೆಗೆಸಿ ಏಳು-ಎಂಟು ವರ್ಷಗಳಾದರೂ ಕೂಡ ಎದ್ಯುಚ್ಛಕ್ತಿ ಕೊಡಿ ಎಂದರೆ ಕೊಟ್ಟಿಲ್ಲ.

ಆಮೇಲೆ Payment of Compensation to Zamindars. ಎಷ್ಟು ದಿವಸಕ್ಕೆ ಕೊಡುತ್ತೀರೋ, ಯಾವ ಕಾಲಕ್ಕೆ ಜಮೀನು ತೆಗೆದುಕೊಳ್ಳುತ್ತೀರೋ ಗೊತ್ತಿಲ್ಲ. ಇನಾಂ ಅಬಾಲಷ್ ಆಕ್ಟು ಮತ್ತು Protection of rights of the tenants in Inam Villages ಆಕ್ಟ್; ಇಂಥ ಬೋಗಸ್ ಆಕ್ಟ್ ಬೇರೆ ಯಾವುದೂ ನೋಡಿಲ್ಲ. ಇಂಥ ಅವಿವೇಕದ ಕೆಲಸ ಯಾವ ಸರ್ಕಾರವೂ ಮಾಡುವುದಿಲ್ಲ ಎಂದು ಹೇಳುತ್ತೇನೆ.

Sri V. P. DEENADAYALU NAIDU (Cubbonpet).—I rise a to point of order, Sir. My learned friend is referring to a particuler Act. It has all the sanctity of having been approved by this august House. Whether it has come into force, or whether it is likely to come into force or whether it has properly come into force is another matter. To call that Act as *Bogus Act*, is it correct? and is it becoming of the dignity of the House?

Mr. CHAIRMAN (Sri M. Mallikarjunaswamy).—As a member of this Legislature, nothing prevents him from holding any opinion. I think the Hon'ble Member can hold that opinion.

Sri V. P. DEENADAYALU NAIDU.—Whether you can call it a Bogus Act . . .

Mr. CHAIRMAN.—That is his opinion. That is all.

ಶ್ರೀ ಜಿ. ಎಸ್. ಪುಟ್ಟಣ್ಣ.—ನಾನೇನೂ ಅಂಥ ಚಾಳಾಚಾಳಿ ವಿಚಾರಗಳನ್ನು ಹೇಳುತ್ತಿಲ್ಲ. ನಾನು ಈಗ "ಬೋಗಸ್" ಎಂಬುಶಬ್ದವನ್ನು ಕೆಲಸಕ್ಕೆಬಾರದ ಆಕ್ಟ್ ಎಂಬ ಅಭಿಪ್ರಾಯ ಸೂಚಿಸಲು ಉಪಯೋಗಿಸಿದ್ದೇನೆ. ಇದು ಒಂದು ಕೆಲಸಕ್ಕೆ ಬಾರದ ಆಕ್ಟ್ ಎಂಬುದಕ್ಕೆ ತುರುವೇಕೆರೆ ತಾಲ್ಲೂಕು ಅರಿಶಿನಹಳ್ಳಿ ಮತ್ತು ಹುಳಿಸಂದ್ರ ಜೋಡಿ ಗ್ರಾಮಗಳ ವಿಚಾರ ಹೇಳಿದರೆನಾಕು.

ಇನ್ನು ಮುಜ್ರಾಯಿ ವಿಚಾರಕ್ಕೆ ಬಂದರೆ ಈ ದಿವಸ ಅನೇಕ ದೇವಸ್ಥಾನಗಳು ನಾಶವಾಗಿ ಹೋಗಿವೆ. ಈ ದೇವಸ್ಥಾನಗಳ ಉತ್ಪತ್ತಿಯೆಲ್ಲ ಅರ್ಚಕರ ಸಂತರ್ಪಣೆ ಇತ್ಯಾದಿಗಳಿಗೆಂದು ದುರ್ವಿನಿಯೋಗವಾಗುತ್ತಿದೆ. ಕೆಲವು ದೇವಸ್ಥಾನಗಳ ಉತ್ಪತ್ತಿ 15-20 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟಿದ್ದರೂ ಆ ಬಗ್ಗೆ ಒಂದು ಕಾನು ಕೂಡ ಕಣ್ಣಿಗೆ ಕಾಣಿಸದಂತೆ ಮಾಯವಾಗುತ್ತಿದೆ. ಇನ್ನಾದರೂ ಸರ್ಕಾರದವರು ಈ ದುರ್ವಿನಿಯೋಗದ ಬಾಬುಗಳನ್ನೆಲ್ಲ ಕೈಬಿಟ್ಟು ಆ ಹಣವನ್ನು ಒಂದು ಸದ್ವಿನಿಯೋಗ ಕಾರ್ಯಕ್ಕೆ ಉಪಯೋಗಿಸಬೇಕಾದ್ದು ಅತ್ಯಗತ್ಯ. ಬಡ ಹುಡುಗರಿಗೆ ಈ ಹಣದಿಂದ ಹಾಸ್ಟಲುಗಳನ್ನು ಏರ್ಪಾಡು ಮಾಡಿ, ಇದರಿಂದ ವಿದ್ಯಾದಾನಕ್ಕೆ ಅನುಕೂಲವಾಗುತ್ತದೆ. ಈ ದಿವಸ ರೆವಿನ್ಯೂ ಇಲಾಖೆಯವರು ರೈತರೇನಾದರೂ ಎಲ್ಲಿಯಾದರೂ ಒಂದು ಬಾವಿ ತೆಗೆದರೆ ಆ ನೀರು ಸರ್ಕಾರದ್ದು ಎಂದು ಹೇಳುತ್ತಾರೆ; ಜಾಗು ನೀರು ತಡೆದರೆ ಆ ನೀರು ಸರ್ಕಾರದ್ದೇ, ಮಳೆ ನೀರು ಬಂದರೆ ಆ ನೀರೂ ಸರ್ಕಾರದ್ದೇ, ಎಂದು ಹೇಳಿ ಆ ರೈತನ ಮನೆಯನ್ನೇ ದಂಡ ಹಾಕಿ ಹಾಳುಮಾಡುತ್ತಿದ್ದಾರೆ. ಆದರೆ ಇವುಗಳೆಲ್ಲ act of God ಅಲ್ಲವೆಂದು ಹೇಳುತ್ತಾರೆ ಇಂಟರ್‌ನ್ಯಾಷನಲ್ ಲಾ ಪ್ರಕಾರ, If certain area of the sea belongs to certain country and if that sea dashes towards any land or house and causes any damage to them then the owners of such land or house are entitled to compensation by that Government ಎಂದು ಹೇಳಿದ್ದಾರೆ. —This is a matter which the Hon'ble the Revenue Minister has to take into consideration.—ಇಂಥ ಸಂದರ್ಭದಲ್ಲಿ ಇದನ್ನು act of God ಎಂದು ಹೇಳುವುದು ಯಾವ ನ್ಯಾಯ? ನಾನು ಇನ್ನೂ ಹೇಳಬೇಕಾದಂಥ ವಿಚಾರಗಳು ಬಹಳವಾಗಿತ್ತು. ಆದರೆ ಅದಕ್ಕೆಲ್ಲ ಈಗ ಕಾಲಾವಕಾಶವಿಲ್ಲ. ಆದರೆ ನಾನಾಗಲೇ ತಿಳಿಸಿದ ಹಾಗೆ ಈಗ ದೇಶದಲ್ಲಿ ಜಾರಿಯಲ್ಲಿರತಕ್ಕ ಲ್ಯಾಂಡ್ ರೆವಿನ್ಯೂ ಸಿಸ್ಟಂನ್ನು ವಜಾ ಮಾಡಬೇಕು. ದೇಶದಲ್ಲಿ ಪುಡಾರಿಗಳು ಮಾಡತಕ್ಕಂಥ ಹಾವಳಿಯನ್ನು ತಡೆಗಟ್ಟಬೇಕು; ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಾಕತಕ್ಕ ಪದ್ಧತಿಯನ್ನು ತಪ್ಪಿಸಿ, ಯೋಗ್ಯ ರೀತಿಯಿಂದ ದಕ್ಷರಾಗಿ, ನಿಷ್ಪಕ್ಷಪಾತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಪ್ರಮೋಷನ್ ಇತ್ಯಾದಿಗಳನ್ನು ಕೊಟ್ಟು ಅಯೋಗ್ಯರನ್ನು ಸಸ್ಪೆಂಡ್, ಡಿಸ್‌ಮಿಸ್‌ಮಾಡಿ, ಅವರನ್ನು ಮನೆಗಳಿಗೆ ಕಳುಹಿಸಿ. ದೇಶಾಭ್ಯುದಯ ಕೆಲಸಕಾರ್ಯಗಳು ಒಂದು ಯೋಗ್ಯ ರೀತಿಯಲ್ಲಿ ನಡೆಯುವಂತೆ ಏರ್ಪಾಡು ಮಾಡಿ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಬಗ್ಗೆ ಒಂದು ಕೀರ್ತಿಯಶಸ್ಸನ್ನು ಪಡೆಯುತ್ತಾರೆಂದು ಆಶಿಸಿ ನನಗಿಷ್ಟು ಮಾತುಗಳನ್ನಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಎಸ್. ನಾರಾಯಣಸ್ವಾಮಿ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ನಾನೀಗ ಈ ಲ್ಯಾಂಡ್ ರೆವಿನ್ಯೂ ವಿಚಾರದಲ್ಲಿ ಕೆಲವು ಸಲಹೆಗಳನ್ನು ಕೊಡಬೇಕೆಂದು ಬಯಸಿದ್ದೇನೆ.

ಮೊಟ್ಟಮೊದಲನೆಯದಾಗಿ ಫೋಡಿಂಗ್ ರೆಕಾರ್ಡ್ಸ್ ವಿಚಾರ ತೆಗೆದುಕೊಂಡರೆ, ಈಗಾಗಲೇ ನನ್ನ ಅನೇಕ ಮಾನ್ಯ ಮಿತ್ರರು ಹೇಳಿರುವ ಹಾಗೆ ಈ ಫೋಡಿಂಗ್ ರಿಕಾರ್ಡುಗಳು 15-20 ವರ್ಷಗಳಿಂದಲೂ ತಾಲ್ಲೂಕ್ ಕಛೇರಿಗಳಲ್ಲಿ ಪೆಂಡಿಂಗ್‌ನಲ್ಲಿ ಬಿದ್ದಿರುತ್ತವೆ. ಈ ರೀತಿಯಾಗಿ ಕೆಲಸ ಕಾರ್ಯಗಳು ನಡೆದರೆ ಯಾವ ಸರ್ಕಾರ ತಾನೇ ಸಂತೋಷಪಡಬಲ್ಲದು? ಈ ವಿಚಾರದಲ್ಲಿ ಅಲ್ಲನಲ್ಲದ ಮತ್ತು ಅನಾವಶ್ಯಕವಾದ ಅಬ್‌ಜೆಕ್ಷನ್ ಹಾಕಿ ರೈತರು ಅನಾವಶ್ಯಕವಾದ ಲಟಿಗೇಷನ್‌ಗಳಿಗೆ ಗುರಿಯಾಗಿ ಹಾಳಾಗುತ್ತಿದ್ದಾರೆ. ಆದರೆ ಇತ್ತೀಚೆಗೆ ಸರ್ಕಾರದವರು ಈ ವಿಚಾರದಲ್ಲಿ ಅವರು ತೃಪ್ತಿಕರವಾಗಿ ಕೆಲಸಮಾಡತಕ್ಕ ರೀತಿಯಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೆಂದು ಹೇಳುತ್ತಿದ್ದರೂ, ಈ ಕೆಲಸಕಾರ್ಯಗಳನ್ನೂ ಹೆಚ್ಚಿನ ರೀತಿಯಲ್ಲಿ ಚೆನ್ನಾಗಿ ನಡೆಯುವಂತೆ ಸೂಕ್ತ ಏರ್ಪಾಡುಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಸೂಚಿಸಲಿಚ್ಛಿಸುತ್ತೇನೆ. ಈ ದಿವಸ ನಮ್ಮ ಪಕ್ಕದ ರಾಜ್ಯವಾದ ಮದರಾಸಿನಲ್ಲಿ ಈ ಬಗ್ಗೆ ಒಂದು ಪದ್ಧತಿ ಇದೆ. ಅಲ್ಲಿ ಈ ದಿವಸ ಯಾರಾದರೂ ಒಂದು ಜಮೀನನ್ನು ಕ್ರಯ—ಭೋಗ್ಯ ಇತ್ಯಾದಿ ಪರಭಾರೆ ಮಾಡಬೇಕಾಗಿದ್ದರೆ, ಆಗ ಆ ಜಮೀನು ಯಾರ ಸ್ವಾಧೀನದಲ್ಲಿರುತ್ತೆಂಬುದನ್ನು ಅಲ್ಲೇ ಸಬ್-ರಿಜಿಸ್ಟ್ರಾರ್ ಅವರ ಆಫೀಸಿಗೆ ಹೋಗಿ ಪರಿಶೀಲನೆ ಮಾಡಿ ಅನಂತರ ಕಾಗದ ಪತ್ರಗಳನ್ನು ರಿಜಿಸ್ಟರ್ ಮಾಡಿಸುತ್ತಾರೆ. ಇಂಥ ಒಂದು ಪದ್ಧತಿಯಿಂದ ಅಲ್ಲಿಯ ಜನರಿಗೆ ಬಹಳ ಅನುಕೂಲವಾಗಿದೆ. ಆದುದರಿಂದ ಅಂಥ ಒಂದು ಪದ್ಧತಿಯನ್ನು ನಮ್ಮ ಸರ್ಕಾರದವರು ಇಲ್ಲಿಯೂ ಜಾರಿಗೆ ತಂದರೆ ಬಡರೈತರಿಗೆ ಅದರಿಂದ ತುಂಬಾ ಅನುಕೂಲವಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ಗಮನ ಕೊಡಬೇಕು. R. R. Office ನಿಂದ ಒಂದು ಸರ್ಟಿಫಿಕೇಟನ್ನು ಪಡೆದುಕೊಂಡು ಬಂದರೆ ಅದರಿಂದಲೂ ಈ ಕಾರ್ಯ ಸುಲಭವಾಗಿ ಮುಂದುವರೆಯಲು ಒಂದು ಅನುಕೂಲವಾಗುತ್ತದೆ.

ಇನ್ನು ಈ ಲ್ಯಾಂಡ್ ರೆವಿನ್ಯೂ ಖರ್ಚಿನ ಬಾಬಿನಲ್ಲಿ ಗ್ರಾಮಾಧಿಕಾರಿಗಳಿಗೆ ಕೊಡತಕ್ಕ ಸಂಭಾವನೆ ವಿಚಾರ ನಮೂದಾಗಿದೆ. ಆದರೆ ಇದರಲ್ಲಿ ಒಂದು ತೀರಾ ವಿಷಾದಕರವಾದಂಥಾ ಸಂಗತಿ ಏನೆಂದರೆ ಈ ಬಗ್ಗೆ ಆ ಗ್ರಾಮನೌಕರರ ವಿಚಾರದಲ್ಲಿ ಯಾವ ಪೊಬಲಗನ್ನೂ ನಮೂದು ಮಾಡಿಲ್ಲ. ಈ ಹಿಂದೆ ಇದೇ ಸಭೆಯಲ್ಲಿ ಗ್ರಾಮ ನೌಕರರುಗಳಿಗೆ ಸಂಬಳ ಸಾರಿಗೆ ಕೊಡಬೇಕೆಂಬ ಬಗ್ಗೆ ಒಂದು ನಿರ್ಣಯ ಬರಿದಿದ್ದಂಥ ಕಾಲದಲ್ಲಿ ವಿಪುಲವಾಗಿ ಚರ್ಚೆ ನಡೆದಿರುತ್ತದೆ. ಆ ದಿವಸ ಸರ್ಕಾರದವರು ಬಹಳ ಸಹಾನುಭೂತಿಯಿಂದ ಆ ವಿಚಾರವನ್ನು ಪರಿಶೀಲನೆ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಹಾಗೆ ಆ ದಿವಸ ಸರ್ಕಾರದವರು ಕೊಟ್ಟಂಥ ಒಂದು ಆಶ್ವಾಸನದ ಬಗ್ಗೆ ಇಲ್ಲಿಯವರೆಗೂ ಏನೊಂದು ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಬಜೆಟ್ಟಿನಲ್ಲಿ ಈ ಬಗ್ಗೆ ಹಣವನ್ನೇನೂ ಒದಗಿಸಿಲ್ಲ. ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆಸತಕ್ಕ ಸರ್ಕಾರ ಯಾವ ಒಂದು ಶಕ್ತ ಪ್ರತಿಪಾದನೆ ಮಾಡಿಕೊಂಡು ಕೆಲಸಗಳನ್ನು ಯಾವ ರೀತಿ ನಡೆಸುತ್ತಿದೆ ಎಂದರೆ ಈ ದಿವಸ ಆ ಜನರಿಂದ ಸರ್ಕಾರಕ್ಕೊಂದು ಸೇವೆಯನ್ನು ಪಡೆದುಕೊಂಡು ಅವರ ದುಡಿಮೆಯನ್ನು ಹೊಂದುತ್ತಿದ್ದರೂ, ಏತಕ್ಕಾಗಿ ಸರ್ಕಾರದವರು ಅವರ ವಿಚಾರದಲ್ಲಿ ಇಷ್ಟು ಅನಾದರಣೆ ಮಾಡುತ್ತಿದ್ದಾರೋ ಅದು ನನಗೆ ತಿಳಿಯದಾಗಿದೆ. ಅವರೂ ಸಹ ಇತರ ನೌಕರರಂತೆ ಮಾನವೀಯ ಪಂಗಡಕ್ಕೆ ಸೇರಿದವರಾಗಿದ್ದರೂ, ಅವರೂ ಸಹ ಮಾನವರು ಎನ್ನತಕ್ಕ ಒಂದು ದೃಷ್ಟಿಯಿಂದ ಅವರನ್ನು ನೋಡದೆ ಹೋದರಲ್ಲ ಎಂಬುದಕ್ಕಾಗಿ ನಾನು ಬಹಳ ವಿಷಾದಪಟ್ಟುಕೊಂಡು ಈಗ ಈ ವಿಚಾರವನ್ನು ಇವರ ಗಮನಕ್ಕೆ ತರಬಯಸುತ್ತೇನೆ. ಆದರೆ ಇತ್ತೀಚೆಗೆ ಪಟೇಲ್ ಶ್ಯಾನುಭೋಗರುಗಳು ತಮ್ಮ ಪ್ರೋಟಿಗೆಯನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಂಡಿದ್ದರು. ಅದರಂತೆ ಅವರಿಗೇನೋ ಸ್ವಲ್ಪ ಸಂಭಾವನೆಯನ್ನು ಹೆಚ್ಚು ಮಾಡಿದ್ದಾರೆ. ಆದರೆ ಅದೇ ರೀತಿ ಗ್ರಾಮನೌಕರರುಗಳಿಗೆ ಯಾವ ರೂಪದಲ್ಲೂ ಸಂಭಾವನೆಯನ್ನು ಒದಗಿಸಲು ಸರ್ಕಾರದವರು ಪ್ರಯತ್ನ ಮಾಡಿಲ್ಲ. ಈಗಲಾದರೂ ಸರ್ಕಾರದವರು ದಯವಿಟ್ಟು ಈ ವಿಚಾರದಲ್ಲಿ ಸಾಕಷ್ಟು ಹಣವನ್ನೊದಗಿಸಲು ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಜಮೀನನ್ನು ಮಂಜೂರುಮಾಡತಕ್ಕ ವಿಚಾರದಲ್ಲಿ ಒಬ್ಬ ರೈತನಿಗೆ ಹತ್ತು ಎಕರೆಗಳಿಗಿಂತ ಜಾಸ್ತಿ ಮಂಜೂರು ಮಾಡಬಾರದೆಂದು ಒಂದು ಹೊಸ ಕಾನೂನನ್ನು ಜಾರಿಗೆ ತರುತ್ತಾರೆಂದು ಕೇಳುತ್ತಿದ್ದೇನೆ. ಈ ಕಾನೂನಿನ ಪ್ರಕಾರ ಯಾರೊಬ್ಬರಿಗೂ ಹತ್ತು ಎಕರೆಗಳಿಗೆ ಮೇಲ್ಪಟ್ಟು ಜಮೀನಿರಕೂಡದೆಂದು ಹೇಳತಕ್ಕದ್ದೂ ಕೂಡ ಅಷ್ಟು ಅನುಕೂಲವಾದುದೆಂದು ನಾನು ಹೇಳಲಾರೆ. ಆದರೆ ಪ್ರಥಮತಃ ವ್ಯವಸಾಯ ಮಾಡತಕ್ಕ ಜಮೀನಿನ ಬಗ್ಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂಬುದೇನೋ ನ್ಯಾಯವಾದುದು. ಈ ಉದ್ದೇಶವನ್ನು ಈಡೇರಿಸುವಷ್ಟು ಭೂಮಿಗಿಂತಲೂ ಹೆಚ್ಚು ಭೂಮಿ ಉಳಿದಿದ್ದರೆ ಅಂಥ ಭೂಮಿಯನ್ನೆಕೆ ಬಾಕಿ ಅಭಿವೃದ್ಧಿ ಕಾರ್ಯಗಳಿಗೆ ಕೊಡಬಾರದೆಂದು ಕೇಳುತ್ತೇನೆ.

ಈ ದಿವಸ ನಮ್ಮಲ್ಲಿರತಕ್ಕ ವ್ಯಕ್ಷ ಸಂಪತ್ತು ನಶಿಸಿಹೋಗುತ್ತಿದೆ. ಇದರಿಂದ ದೇಶದಲ್ಲಿ ಮಳೆ ಬೆಳೆಗಳು ಸರಿಯಾಗಿ ಆಗುತ್ತಿಲ್ಲವೆಂದು ವಿಜ್ಞಾನಶಾಸ್ತ್ರ ಬಲ್ಲವರು ಹೇಳುತ್ತಿದ್ದಾರೆ. ಈ ದಿವಸ ಬೆಂಗಳೂರು, ಮೈಸೂರು, ದಾವಣಗೆರೆ ಮತ್ತು ಕೆ.ಜಿ.ಎಫ್: ಈ ನಗರಗಳಿಗೆ ಸೌದೆ ಸರಬರಾಯಿಗಾಗಿ ದೇಶದಲ್ಲಿದ್ದ ಅರಣ್ಯಸಂಪತ್ತೆಲ್ಲ ಮುಗಿಯುತ್ತಾ ಬಂದಿದೆ. ಮುಂದಕ್ಕೆ ಸೌದೆ ಸರಬರಾಯಿ ವಿಚಾರದಲ್ಲೂ ಕೂಡ ಬಹಳ ಕಷ್ಟವಿರುತ್ತದೆ. ಈ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ಈಗಿನಿಂದಲೂ ಕೈಗೊಳ್ಳದೆ ಹೋದರೆ ಮುಂದಕ್ಕೆ ಬಹಳ ದುಡ್ಡನ್ನು ಈ ಬಾಬಿನಲ್ಲಿ ಖರ್ಚು ಮಾಡಬೇಕಾಗಿ ಬರುತ್ತದೆ. ಈ ವಿಚಾರದಲ್ಲಿ ಯಾವ ಯಾವ ಗ್ರಾಮಗಳಲ್ಲಿ ವಿಶೇಷವಾಗಿ ಭೂಮಿಯಿದ್ದು ಅಲ್ಲಿ ಜನರು ಮುಂದೆ ಬರುವುದಾದರೆ ಅಂಥವರಿಗೆ ಫ್ಯೂಯಲ್ ಪ್ಲಾನ್‌ಟೇಷನ್‌ಗಳನ್ನು ಬೆಳೆಸತಕ್ಕ ಬಗ್ಗೆ ಭೂಮಿಯನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಮುಂದಕ್ಕೆ ಸೌದೆ ಸರಬರಾಯಿಗೂ ಕೂಡ ಅಂಥ ತೊಂದರೆ ಇರುವುದಿಲ್ಲ. ಆದರೆ ಈ ಹಿರಿದೆ ಇದೇ ಸಭೆಯಲ್ಲಿ ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿಯನ್ನು ಫ್ಯೂಯಲ್ ಪ್ಲಾನ್‌ಟೇಷನ್ ಬೆಳೆಸತಕ್ಕ ಬಗ್ಗೆ ಕೊಡಲು ಸರ್ಕಾರದವರ ನೀತಿ ಏನೆಂದು ಕೇಳಿದ್ದ ಒಂದು ಪ್ರಶ್ನೆಗೆ 'the matter is under examination' ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಹೀಗೆ ಸರ್ಕಾರದವರು

ಒಂದೊಂದು ಕಾಲದಲ್ಲಿ ಒಂದೊಂದು ತರಹ ಉತ್ತರ ಕೊಡುತ್ತಿರುವುದನ್ನು ನೋಡಿದರೆ ಅವುಗಳಲ್ಲಿ ಯಾವುದು ಸರಿಯೋ ಯಾವುದು ಸರಿಯಲ್ಲವೋ ಒಂದೂ ತಿಳಿಯದು. ಯಾವ ಒಂದು ಗ್ರಾಮದಲ್ಲೇ ಆಗಲಿ ವ್ಯವಸಾಯಕ್ಕೂ ಮತ್ತು ಗೋವಾಳಕ್ಕೂ ಅವಶ್ಯಕವಾಗಿ ಬೇಕಾಗಿರುವಷ್ಟು ಜಮೀನನ್ನು ಬಿಟ್ಟುಬಿಟ್ಟು ಇನ್ನುಳಿಯತಕ್ಕ ಜಮೀನೇನಾದರೂ ಅಂಥ ಕಡೆಗಳಲ್ಲಿದ್ದರೆ ಅಲ್ಲಿ ಈ ಅರಣ್ಯ ಸಂಪತ್ತನ್ನು ಬೆಳೆಸಲು ಅವಕಾಶ ಮಾಡಿಕೊಡಿ.

ಶ್ರೀ ಎಂ. ಪಿ. ಪಾಟೀಲ್ (ರೆವಿನ್ಯೂ ಇಲಾಖೆಯ ಮಂತ್ರಿಗಳು).—ಆರೀತಿ ರೂಲ್ಸಿನಲ್ಲೇ ಹೇಳಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಆ ರೀತಿ ಅವಕಾಶವಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದುದಕ್ಕಾಗಿ ನಾನು ಸಂತೋಷಪಡುತ್ತೇನೆ. ಆದರೆ ಈಗ ರೂಲ್ಸಿನಲ್ಲಿ ಫ್ರೂಟ್ ಪ್ಲಾಂಟೇಷನ್‌ಗಳಿಗೆ ಮಾತ್ರ ಎಗ್ಸೆಂಪ್ಷನ್ ಕೊಡತಕ್ಕ ಅವಕಾಶವಿರುತ್ತೆಂದು ಕೇಳುತ್ತೇನೆ. ಫ್ಯೂಯಲ್ ಪ್ಲಾಂಟೇಷನ್‌ಗಳಿಗೆ ಅಂಥ ಎಗ್ಸೆಂಪ್ಷನ್ ಇರುವುದಿಲ್ಲ. ಆ ವಿನಾಯಿತಿಯನ್ನು ಈ ಫ್ಯೂಯಲ್ ಪ್ಲಾಂಟೇಷನ್‌ಗಳ ವಿಚಾರದಲ್ಲೂ ಜಾರಿಗೆ ತರಬೇಕೆಂದು ಸೂಚಿಸುತ್ತೇನೆ.

ಇನ್ನು ಈ ದಿವಸ ಹಂಚಕ್ಕೆ ಜಮೀನುಗಳನ್ನು ಬ್ಲಾಕುಗಳಾಗಿ ವಿಂಗಡಿಸಿ ದರಖಾನ್ತುದಾರರಿಗೆ ಹಂಚುತ್ತಾರೆಂದು ಕೇಳಿದ್ದೆನು. ಏಪ್ರಿಲ್ ನಾಲ್ಕನೆಯ ತಾರೀಖಿನೊಳಗಾಗಿ ಹಾಗೆ ಹಂಚುತ್ತಾರೆಂದು ಕೇಳಿದ್ದೆನು. ಆದರೆ ಈಗಾಗಲೇ ಏಪ್ರಿಲ್ 24ನೇ ತಾರೀಖು ಆಯಿತು. ಆದರೆ ಇನ್ನೂ ಏನೂ ಜಾರಿಗೆ ಬಂದಂತೆ ಕಾಣುತ್ತಿಲ್ಲ. ಜಮೀನು ಕೊಡತಕ್ಕ ವಿಚಾರದಲ್ಲಿ ಇನ್ನಾದರೂ ದರಖಾನ್ತುದಾರರು ವರ್ಷಾನುಗಟ್ಟಲೆ ತಾಲ್ಲೂಕು ಕಛೇರಿಗಳಿಗೆ ಯಾತ್ರೆ ಹೋಗತಕ್ಕ ಪದ್ಧತಿಯನ್ನು ತಪ್ಪಿಸಬೇಕು. ಎಲ್ಲೆಲ್ಲಿ ಸಾಗುವಳಿಗೆ ಯೋಗ್ಯವಾದ ಜಮೀನಿದೆಯೋ ಅದನ್ನೆಲ್ಲ ಜಮೀನಿಲ್ಲದ ದರಖಾನ್ತುದಾರರಿಗೆ ಒಂದು ಗೊತ್ತಾದ ಅವಧಿಯೊಳಗೆ ಮಂಜೂರು ಮಾಡುವಂತೆ ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಬೇಕು. ಈ ದಿವಸ ತಾಲ್ಲೂಕು ಅಮಲ್ದಾರರಿಗೆ ಜಮೀನು ಮಂಜೂರು ಮಾಡತಕ್ಕ ಅಧಿಕಾರವಿಲ್ಲ. ಈ ಅಧಿಕಾರವನ್ನು ಈಗ ಸಬ್ ಡಿವಿಜಿಲ್ ಆಫೀಸರಿಗೆ ವರ್ಗಾಯಿಸಲಾಗಿದೆ. ಇದರಲ್ಲಿ ಅಂಥ ಯಾವ ಬುದ್ಧಿವಂತಿಕೆ ಇದೆಯೋ ನನಗೆ ಗೊತ್ತಾಗುತ್ತಿಲ್ಲ. ಈಗಾಗಲೇ ಜನ ತಾಲ್ಲೂಕು ಆಫೀಸಿಗೆ ಹೋಗಿ ಬೇಕಾದಷ್ಟು ಖರ್ಚು ಮಾಡುತ್ತಿದ್ದಾರೆ. ಹೀಗಿರುವಾಗ ಇಂತಹ ಕೇಸುಗಳನ್ನು ಮತ್ತೊಂದು ಆಫೀಸಿಗೆ ಕಳುಹಿಸುವುದು ಅಷ್ಟು ಸರಿಯಾದುದಲ್ಲ. ಅದರಿಂದ ನಾನು ಸಲಹೆ ಕೊಡುವುದು, ಜಮೀನನ್ನು ಮಂಜೂರು ಮಾಡುವಾಗ ಆಯಾ ತಾಲ್ಲೂಕಿನ ತಹಸೀಲ್ದಾರರುಗಳೇ ಐದು ಎಕರೆಗಳವರೆಗೆ ಜಮೀನನ್ನು ಮಂಜೂರು ಮಾಡುವ ಅಧಿಕಾರವನ್ನು ಕೊಡುವುದು ಸರಿಯಾಗಿರುತ್ತದೆ. ಆ ರೀತಿಯಾದ ಒಂದು ಯೋಜನೆಯನ್ನು ಸರಕಾರ ಹಾಕಿಕೊಳ್ಳಬೇಕೆಂದು ಕೋರುತ್ತೇನೆ.

ಇನ್ನು ಕ್ಷಾಮದ ವಿಚಾರವಾಗಿ ಒಂದೆರಡು ವಿಷಯಗಳನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ. ಕ್ಷಾಮದ ವಿಚಾರವಾಗಿ ಅನೇಕ ಸಲ ಸರಕಾರದ ಗಮನಕ್ಕೆ ತರುತ್ತಿದ್ದರೂ ಈ ವಿಚಾರದಲ್ಲಿ ಸರಕಾರ ಸಾಕಷ್ಟು ಗಮನ ಕೊಡುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಅದರಲ್ಲೂ ನಮ್ಮ ಕೋಲಾರದ ಜಿಲ್ಲೆ ಕ್ಷಾಮಕ್ಕೆ ಆಗಾಗ್ಗೆ ತುತ್ತಾಗುತ್ತಿದೆ ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ವರ್ಷದಲ್ಲಿ ನಾಲ್ಕು ಐದು ತಿಂಗಳುಗಳ ಕಾಲಕ್ಕೆ ಮೇಲ್ಪಟ್ಟು ಮಳೆ ಇಲ್ಲದೆ ಹೋಗುವ ಸಂಭವವಿದೆ; ಮತ್ತು ಅಕಾಲದ ಅಥವಾ ಅಲ್ಪಕಾಲದ ಮಳೆಯಿಂದ ಆ ಪ್ರದೇಶ ಈ ರೀತಿಯಾಗಿ ಕ್ಷಾಮಕ್ಕೆ ತುತ್ತಾಗುತ್ತಿದೆ. ಇದರಿಂದ ವ್ಯವಸಾಯ ಮಾಡುವವರಿಗೆ ಬಹಳ ತೊಂದರೆಯಾಗುತ್ತದೆ. ಅದರಲ್ಲಿಯೂ ನಮ್ಮ ಜಿಲ್ಲೆಯಲ್ಲಿ ವ್ಯವಸಾಯವಲ್ಲದೆ ಬೇರೆ ಯಾವ ಉಪಕಸುಬುಗಳನ್ನೂ ಮಾಡದೆ ಇರುವ ರೈತರಿಗೆ ಮತ್ತು ವ್ಯವಸಾಯವನ್ನೇ ನಂಬಿಕೊಂಡು ಜೀವನ ಮಾಡುವ ರೈತರಿಗೆ, ಅವರು ಮಾಡುವ ಬೆಳೆಯು ಕೆಟ್ಟುಹೋಗಿ, ಮುಂದಿನ ವರ್ಷದ ಮಳೆಯನ್ನು ಕಾಯಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದ ಅವರು ಹಿಂದೆ ಈ ವ್ಯವಸಾಯಕ್ಕಾಗಿ ಖರ್ಚು ಮಾಡಿದ್ದ ಬಾಗೋಡು ಮಗ್ಗೈರೆ ಖರ್ಚುಗಳು ಹೆಚ್ಚಾಗಿ ಅನೇಕ ವೇಳೆ ಸಾಲ ಮಾಡುವ ಪರಿಸ್ಥಿತಿಗೆ ಬಂದಿರುತ್ತಾರೆ. ಮಳೆ ಬಂದನಂತರ ಪುನಃ ಬೇಸಾಯ ಮಾಡಿ ಬೆಳೆಯನ್ನು ಮಾಡಿ ಅನಂತರ ಅದನ್ನು ಮಾರಿ ಹೀಗೆ ಹಿಂದೆ ಮಾಡಿರುವ ಸಾಲಗಳನ್ನು ತೀರಿಸುತ್ತಾರೆ. ಮುಂದೆ ಮಳೆ ಪುನಃ ಬರುವಿದ್ದಾಗ ಮತ್ತೆ ಸಾಲ ಮಾಡಿ ರೈತನು ಜೀವನ ನಡೆಸಬೇಕಾಗುತ್ತದೆ. ಈಗೇನೋ ರಿಲೀಫ್ ವರ್ಕುಗಳು ಎಂದು ಕ್ಷಾಮವಾದ ಕಾಲದಲ್ಲಿ ಮಾಡುತ್ತಿದ್ದೀರಿ. ಆದರೆ ಅದರಿಂದ ಜನಗಳಿಗೆ ತಕ್ಕಷ್ಟು ಸೌಕರ್ಯಗಳು ದೊರೆಯುತ್ತಿಲ್ಲ. ಆದ್ದರಿಂದ ಕ್ಷಾಮ ಬಂದಾಗ ರಿಲೀಫ್ ವರ್ಕ್‌ಎಂದು ತೆಗೆದುಕೊಂಡು ಸ್ವಲ್ಪ ಮಳೆ ಬಂದರೆ, ಇರಿಗೇಷನ್ನು ಡೆವೆಲಪ್‌ಮೆಂಟು ವರ್ಕುಗಳೆಂದು ಮಾಡಬೇಕು. ಆದರೆ ಕೆಲವು ವೇಳೆ ಮಳೆಯೇ ಸಕಾಲದಲ್ಲಿ ಬರುವುದಿಲ್ಲ. ಪ್ರಕೃತಿಯ ವಿಕೋಪದಿಂದ ಕೆಲವುವೇಳೆ ಈ ರೀತಿಯಾದ ಕ್ಷಾಮಕ್ಕೆ ತುತ್ತಾಗಬೇಕಾದ ಸಂದರ್ಭಗಳು ಒದಗುತ್ತವೆ. ಈರೀತಿಯಾದ ಕ್ಷಾಮದ ಪರಿಸ್ಥಿತಿ ಬರುತ್ತಿದೆ ಎಂದು ಪದೇ ಪದೇ ಸರ್ಕಾರದ ಗಮನಕ್ಕೆ ತರುತ್ತಿದ್ದರೂ, ಅವರು ಇದಕ್ಕೆ ತಕ್ಕ ಪರಿಹಾರವನ್ನು ಯೋಚನೆ ಮಾಡುತ್ತಿಲ್ಲ; ಮತ್ತು ಈ ಕಡೆಗೆ ಗಮನವನ್ನು ಹರಿಸುತ್ತಿಲ್ಲ. ಈ ರೀತಿಯಾದ ಕ್ಷಾಮಕ್ಕೆ ಪ್ರಕೃತಿಯ ವಿಕೋಪವೇ ಕಾರಣವೆಂದು ಕುಳಿತುಕೊಳ್ಳಬೇಕಾದ ಅಗತ್ಯವಿಲ್ಲ. ಇದಕ್ಕೆ ಏನಾದರೂ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕಾದುದು ಅಗತ್ಯ. ಈ ಬಗ್ಗೆ ನನ್ನ ಸಲಹೆ ಇಷ್ಟು: ಮಳೆಯನ್ನೇ ನಂಬಿಕೊಂಡು ಮುಖ್ಯವಾಗಿ ವ್ಯವಸಾಯವನ್ನೇ ಮಾಡುತ್ತಿರುವಂತಹ ರೈತರಿಗೆ ಒಬ್ಬರಿಗೊಂದು ನೀರಾವರಿ ಭಾವಿಯಂತೆ ಕಟ್ಟಿಸಿಕೊಡಬೇಕು. ಇವತ್ತೆಲ್ಲ ಈ ರೀತಿಯಾಗಿ ನುಮಾರು ಎರಡು ಲಕ್ಷ ಕುಟುಂಬಗಳಿರಬಹುದು. ಪ್ರತಿಯೊಂದು ಕುಟುಂಬಕ್ಕೂ ಅನುಕೂಲವಾಗುವಂತೆ ಒಂದೊಂದು ಬಾವಿಯನ್ನು ಕಟ್ಟಿಸಿಕೊಡುವ ಒಂದು ಯೋಜನೆಯನ್ನು ತಯಾರುಮಾಡಬೇಕು. ಹೀಗೆ ಬಾವಿಗಳನ್ನು ಕಟ್ಟಿಸಿಕೊಡಲು ಹಣದ ಅಭಾವ ವಿರುವುದಾದರೆ ಒಂದು ಹತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ಸಾಲದ ರೂಪವಾಗಿ ತೆಗೆದುಕೊಳ್ಳಬಹುದು. ಹೀಗೆ ಸಾಲದ ರೂಪವಾಗಿ ತೆಗೆದುಕೊಂಡ ಹಣವನ್ನು ರೈತರಿಗೆ ಸಾಲದ ರೂಪದಲ್ಲಿ ಕೊಟ್ಟು ಒಂದೊಂದು ಬಾವಿಯನ್ನು ನೀರಾವರಿಗಾಗಿ ಮಾಡಿಸಿಕೊಟ್ಟರೆ ಅದರಿಂದ ರಾಷ್ಟ್ರದ ಸಂಪತ್ತೂ ಹೆಚ್ಚುತ್ತದೆ ಮತ್ತು ಬಡಜನಗಳಿಗೂ ತೃಪ್ತಿಯಾಗುತ್ತದೆ ಮತ್ತು ಇದರಿಂದ ಬಹಳಮಟ್ಟಿಗೆ ಅನುಕೂಲವಾಗುತ್ತದೆ. ಈಗಾಗಲೇ ಅಲ್ಪ ಸ್ವಲ್ಪ ಸಾಲಗಳು ರೆವೆನ್ಯೂ ಬಾಬಿನಲ್ಲಿ ಮತ್ತು ಏನ್.ಇ.ಎಸ್. ಬ್ಲಾಕುಗಳಲ್ಲಿ ದೊರೆಯುತ್ತವೆ ಎಂದಿದ್ದರೂ ಕೂಡ ಅದರಲ್ಲಿ ಸಾಕಷ್ಟು ಸಹಾಯಗಳು ದೊರೆಯುತ್ತಿಲ್ಲ; ಮತ್ತು ಕೆಲವುವೇಳೆ ಅಲಾಟು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಮೆಂಟೇ ಇಲ್ಲ ಎಂದು ಸಾಲ ಸಿಕ್ಕುವುದೂ ಕೂಡ ಕಷ್ಟವಾಗುತ್ತಿದೆ. ಅಲ್ಪ ಸ್ವಲ್ಪ ನೀರಾವರಿ ಕೆಲಸಗಳು ಮಳೆ ಬಂದಾಗ, ಕೋಲಾರ, ಗೋರಿಬಿದನೂರು, ಚಿಕ್ಕಬಳ್ಳಾಪುರ ಮತ್ತು ಶಿಡ್ಲಘಟ್ಟ ಇಲ್ಲಿಯವರೆಗೆ ತಕ್ಕಷ್ಟು ನೀರಾವರಿ ಕಾರ್ಯಗಳು ಆಗುತ್ತಿವೆ. ಅದರಿಂದ ಮುಂದಕ್ಕೆ ಎಂದರೆ, ಶ್ರೀನಿವಾಸಪುರ, ಮುಳಬಾಗಿಲು ಈ ಪ್ರದೇಶಗಳು ಮಳೆಯೇ ಬಾರದೆ ಬಹಳ ಕಷ್ಟಕ್ಕೆ ಈಡಾಗುತ್ತಿರುವ ತಾಲ್ಲೂಕುಗಳಾಗಿವೆ. ಅದರಿಂದ ಇಂತಹ ಕಡೆಗಳಿಗೆ ಬಾವಿಗಳನ್ನು ಕೊಟ್ಟು ಇಷ್ಟರಮಟ್ಟಿನ ಪೌಕರ್ಯಗಳನ್ನು ಕಲ್ಪಿಸಿಕೊಟ್ಟರೆ ಇದರಿಂದ ಜನಗಳಿಗೆ ಎಷ್ಟೋ ಅನುಕೂಲವಾಗುತ್ತದೆ ಎಂದು ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಅಲ್ಲದೆ ಈ ಕ್ಷಾಮದ ಪ್ರದೇಶಗಳಲ್ಲಿ ಗ್ರಾಮ ಕೈಗಾರಿಕೆಗಳನ್ನು ಹೆಚ್ಚಾಗಿ ಮಾಡಬೇಕು. ಈ ಕೈಗಾರಿಕೆಗಾಗಿ ಪ್ರತ್ಯೇಕವಾದ ಡಿಪಾರ್ಟ್‌ಮೆಂಟೇನೋ ಇದೆ. ಆದರೆ ಅದು ಎಷ್ಟರಮಟ್ಟಿನ ಪ್ರಗತಿಯನ್ನು ಸಾಧಿಸಬೇಕೋ ಅಷ್ಟನ್ನು ಸಾಧಿಸುತ್ತಿಲ್ಲ; ಮತ್ತು ಏನೂ ಇಲ್ಲವೆಂದು ಹೇಳಿದರೂ ತಪ್ಪಾಗುವುದಿಲ್ಲ. ಈ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಇಂತಹ ಗ್ರಾಮ ಕೈಗಾರಿಕೆಗಳನ್ನು ಈ ಕ್ಷಾಮಕ್ಕೆ ಈಡಾಗಿರುವ ಪ್ರದೇಶಗಳಲ್ಲಿ ಮಾಡಿದರೆ ಇಲ್ಲಿರುವ ಜನ ಪುನೀತರಾಗುತ್ತಾರೆ. ಹಾಗೆ ಮಾಡದೆ ಈಗ ಮಾಡುತ್ತಿರುವಂತೆ "ತಲೆಗೆಲ್ಲ ಒಂದೇ ಮಂತ್ರ" ಎನ್ನುವಂತೆ ಮಾಡಿದರೆ ಇದರಿಂದ ಅಷ್ಟು ಪ್ರಯೋಜನ ಜನಕ್ಕೆ ದೊರಕುವುದಿಲ್ಲ. ಅಲ್ಲದೆ ಸಕಾಲಕ್ಕೆ ಮಳೆ ಬಾರದೆ ಇರುವುದರಿಂದ ಇಲ್ಲಿ ನೀರು ಸಿಕ್ಕದೆ ಯಾವ ವ್ಯವಸಾಯವನ್ನೂ ಮಾಡುವುದಕ್ಕಾಗುವುದಿಲ್ಲ. ಹೀಗೆ ಮಳೆ ಬಾರದೆ ಇರುವ ಪ್ರದೇಶಗಳಲ್ಲಿ ಮತ್ತು ವ್ಯವಸಾಯವನ್ನು ಮಾಡದೇ ಇರುವ ಪ್ರದೇಶಗಳಲ್ಲಿ ಯಾವುದಾದರೂ ಒಂದು ರೀತಿಯಾದ ಯೋಜನೆಯ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುವುದು ಉತ್ತಮ. ಈ ರೀತಿಯಾದ ಕಾರ್ಯಕ್ರಮವನ್ನು ಮುಂದಿನ ನುಗ್ಗಿ ಬರುವವರೆಗೂ ಹಾಕಿಕೊಂಡರೆ ಬಡ ಜನಗಳಿಗೆ ಸ್ವಲ್ಪ ಮಟ್ಟಿನ ಅನುಕೂಲಗಳು ದೊರೆಯುತ್ತವೆ. ಈ ರೀತಿಯಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ಗಳೆಂದು ಗ್ರಾಮಗಳಲ್ಲಿ ಇಪ್ಪತ್ತೈದು ಭಾಗ ಪಂಚಾಯತಿಯವರು ಕೊಡಬೇಕೆಂದು ಮತ್ತು ಇಪ್ಪತ್ತೈದು ಭಾಗ ಪಬ್ಲಿಕ್ ಕಾಂಟ್ರಿಬ್ಯೂಷನ್ನು ಎಂದು ಮಾಡಿರುವುದರಿಂದ ಬಹಳ ಹೆಚ್ಚಿನ ರೇಟುಗಳು ಬೀಳುತ್ತವೆ. ಇದನ್ನು ಸರಿಪಡಿಸಬೇಕು. ಆದರೆ ಈ ರೀತಿಯಾದ ಕಾಂಟ್ರಿಬ್ಯೂಷನ್ನು ನಿರೀಕ್ಷಿಸಿದಷ್ಟು ಕೆಲವು ಕಡೆಗಳಲ್ಲಿ ಸಿಕ್ಕುವುದು ಕಷ್ಟವಾಗಿದೆ. ಅದರಲ್ಲೂ ಈ ರೀತಿಯಾಗಿ ಮಾಡುವುದು ಕೋಲಾರ, ಶ್ರೀನಿವಾಸಪುರ ಮತ್ತು ಮುಳಬಾಗಿಲುಗಳಲ್ಲಿ ಸರಿಯಾಗಿಲ್ಲ ಎಂದು ಹೇಳಬೇಕಾಗಿದೆ. ಇವನ್ನೆಲ್ಲ ಸರಿಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Sri B. BASAVALINGAPPA (Bangalore South).—Mr. Speaker, Sir, I do not wish to dilate on every aspect of Revenue demand, but confine myself to the unconstitutional aspect of maintenance and establishment of Muzrai institutions. We hold our banner and constitution as sacred and supreme in this land. Whatever we do and whatever Government does must be in conformity with the provisions of the Constitution. Our Constitution has declared that our nation is a secular one. Whatever that is done shoud be in conformity with this principle laid down therein. What is a secular State? I define a secular State as one that will not admit of religious faith, religious teachings and religious worships. In Chapter IV of the Constitution under the Directive Principles of the State policy, it is amply made clear that it does not enjoin the State Government to embark upon maintaining or establishing the Muzrai Institutions. Therefore, if the Government has to continue whatever has been handed over to us from the past, that must be discontinued at any cost and all at once. There is also a provision in the Constitution allowing every citizen of India to have freedom of religion. That is amply enunciated in article 25 to article 28 of the Constitution. As per article 26, people alone are entitled to establish and propagate and worship their deities as they please and follow their religion. But, what has been done now? The Government has an Act to their credit, namely, the Mysore Religious and Charitable Institutions Act. As per section 3 of the Act, the chief controlling authority in all matters connected with Muzrai Institutions is vested in Government. Government forms the sole authority to control and establish religious teachings. Section 2 of the Act says:

"1. Religious or Charitable Institution includes the endowment for the carrying out of any religious or charitable object;

2. 'Muzrai Institution', means and includes:

"Every Matha, temple, mosque or other place of worship or religious service, every chatra or house of feeling or rest for travellers with or without charge, or other institution of a religious or charitable nature which is now actually under the sole charge of

ಪುಸ್ತಿ ಕ್ರಮಾಂಕ Accession No (B) ....4771.
ದಿನಾಂಕ Date.....

Government or for the support of which monthly or annual grant in perpetuity is made from the public revenues, or an inam is granted and is recognised and registered as a devadaya or dharmadaya grant."

2 P.M.

This Act does not cover Zorostrians, Christians and Buddhists. Is this not discrimination? Apart from that, I also maintain that it is unconstitutional. If religions are allowed to be followed by its observers in this fair country of ours, why should there be this discrimination between one religion and another?

Sri M. P. PATIL.—Sir, I rise, to a point of order. The Hon'ble Member is discussing the Muzrai institution. I think the Muzrai institution comes under demand No. 47. That is not under discussion now.

Mr. CHAIRMAN.—Let the Hon'ble Member confine his remarks to the demand under discussion.

Sri B. BASAVALINGAPPA.—Thank you, Sir. I would only urge on Government to bear in mind what I have said about the Muzrai institution at that time and consider how far the State should continue this kind of discrimination between one religion and another.

Then I come to the question of Shanbhogues in the revenue establishment. I am fully aware that the abolition of hereditary offices has worked wonderfully well and rendered yeoman service to the people. I have made my stand about Shanbhogues very clear. These Shanbhogues have played a great havoc in the life of the common man in villages. They have been a menace to the peaceful living of the villagers. I suggest that Government should be bold to apply the policy of abolition of hereditary offices to Shanbhogues also and they should bring about a uniform law throughout the State.

Last time I had suggested the tranfer of gazetted officers serving in the several parts of North Karnataka. I find that except one or two officers who were brought to the Secretariat they have not been transferred and the suggestion made by me last time has not been implemented. The continuance of the gazetted officers in their birth place is not good because they develop certain prejudices and affection towards certain persons in the day to day administration of Government. I hope Government will accept this suggestion of mine regarding transfers and implement it fully so as to bring about a system of administration which will be useful to a larger section of the people of the State.

With these remarks I conclude.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೆಬಿಹಾಳ).—ಅಧ್ಯಕ್ಷರೇ, ನಮ್ಮ ಮುಂದಿರುವ ಮೂರು ಬೇಡಿಕೆಗಳಿಗೂ ನಮ್ಮ ತಿಯನ್ನು ಕೊಟ್ಟು ಇನಾಂ ರದ್ದಿಯಾತಿ ಕಾಯಿದೆ ಬಗ್ಗೆ ಎರಡು ಮಾತುಗಳನ್ನು ಹೇಳಲು ನಿಂತಿದ್ದೇನೆ. ಮುಂಬೈ ಸರ್ಕಾರದಲ್ಲಿ 20-22 ಇನಾಂ ರದ್ದಿಯಾತಿ ಕಾಯಿದೆಗಳನ್ನು ಪಾಸ್ ಮಾಡಿದರು. ಅದರ ಪೈಕಿ ಮುಖ್ಯವಾಗಿ ಈಗ ಇರುವಂಥ ಮುಂಬೈ ಪ್ರದೇಶ ಹೊರತಾಗಿ ಪರಗಣಾ ಮತ್ತು ಕುಲಕರ್ಣಿ ವರ್ತ 1950ರಲ್ಲಿ ರದ್ದಾಯಿತು. ಆದರೆ ಆ ವರ್ತ ರದ್ದಿ ಕಾಯಿದೆ ಪ್ರಕಾರ ಮೂರು ಜಿಲ್ಲೆಗೆ ಬೆಳಗಾಂ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಯೊಳಗೆ 1951ನೆ ಇಸವಿಯೊಳಗೆ ಅಮಲನಲ್ಲಿ ಬಂತು. ಅಮಲನಲ್ಲಿ ಬಂದಬಳಿಕ ಪರಗಣಾ ಮತ್ತು ಕುಲಕರ್ಣಿ ವರ್ತ ರದ್ದಾಯಿತು. ಇವರುಗಳು ಆಯಾ ಜಮೀನಿನ ಕಂದಾಯ ಆರುಪಟ್ಟು 1956ರಲ್ಲಿ ಕೊಡಬೇಕೆಂದು ಆಯಿತು. ಆ ಪ್ರಕಾರ 1956ನೆ ಇಸವಿಯಿಂದ ಕಂದಾಯವನ್ನು ಕೊಟ್ಟಿದ್ದಾರೆ. ಜಮೀನನ್ನು ಅವರೇ ಮಾಡುತ್ತಾರೆ, ಇನಾಂದಾರರು ಮಾಡತಕ್ಕದ್ದು ಎಲ್ಲ ಮಾಡಿರುತ್ತಾರೆ. ಆದರೆ ಪರಿಹಾರ ಧನ ಕೊಡತಕ್ಕದ್ದು ಸರಕಾರವು. ಕಾಯಿದೆ ಪ್ರಕಾರ ಏಳೆಂಟು ವರ್ಷಗಳಾದರೂ ಏನೂ ಮಾಡಿಲ್ಲ. ಹೀಗೇಕೆ ಮಾಡಲಲ್ಲವೆನ್ನುವುದು ಗೊತ್ತಾಗಿಲ್ಲ. ಇದೇ ಕಾಯಿದೆಯೊಳಗೆ, ಕುಲಕರ್ಣಿಯವರ ಪಾಳಿ ರಿಜಿಸ್ಟರ್ ಹೋದಕಾರಣ ನೂಕ್ತ ಪರಿಹಾರ ಕೊಡಬೇಕೆಂದು ಮಾಡಿದ್ದರೂ, ಎಂಟು ವರ್ಷಗಳಾದರೂ ಏನೂ ಕೊಟ್ಟಿಲ್ಲ. ಪರಗಣಾ ವರ್ತದಾರರಿಗೆ Cash allowances ಕೊಡುವ ಪದ್ಧತಿ ಇತ್ತು. ಅದರ ಇಂತಿಷ್ಟು ಪಟ್ಟು ಕಿಮ್ಮತ್ತು ಅವರಿಗೆ ಕೊಡಬೇಕೆಂದು ಮಾಡಿದರು. ಮತ್ತೆ 1953ನೆಯ ಇಸವಿಯೊಳಗೆ Cash ಕೊಡುವುದು ಬೇಡ, ಅವರಿಗೆ transferable ಬಾಂಡ್‌ಗಳನ್ನು ಕೊಡಬೇಕು, ಅದಕ್ಕೆ 100 ಕ್ಕೆ ಮೂರರಂತೆ ಬಡ್ಡಿ ಸಹಿತ ಕೊಡಬೇಕೆಂದು ಇನ್ನೂ ಒಂದು ಕಾಯಿದೆ ಮಾಡಿದರು. ಇನ್ನೂವರೆಗೆ ಸರ್ಕಾರದವರು ಬಾಂಡ್‌ಗಳನ್ನು ಕೊಡಲೊಲ್ಲರು, ಏನೇನೂ ಮಾಡಲೊಲ್ಲರು. ಎಂಟುವರ್ಷಗಳಾದರೂ ಹೀಗೇ ಇದೆ. ಡೆಪ್ಯುಟಿ ಕಮಿಷನರ ಮತ್ತು ಅಸಿಸ್ಟೆಂಟ್ ಕಮಿಷನರ ಕಚೇರಿಗಳಿಗೆ ಅಡ್ಡಾಡುತ್ತಾರೆ. ತಮಗೆ ಬರುವಂಥ ಪರಿಹಾರ ಸಿಕ್ಕದೆ ತಮ್ಮಲ್ಲಿರುವ ಹಣವನ್ನು ಖರ್ಚು ಮಾಡಿಕೊಂಡು ಬರುತ್ತಾರೆ. ಅವರಿಗೆ ಒಂದು ಹೈಸಹ ಕೊಟ್ಟಿಲ್ಲ, ಬಾಂಡುಗಳನ್ನೂ ಕೊಟ್ಟಿಲ್ಲ, ಏನೇನೂ ಮಾಡಿಲ್ಲ. ಇದನ್ನು ನೋಡಿದರೆ ಸರ್ಕಾರದವರು ಪರಿಹಾರವನ್ನು ದಾನ ಕೊಡುವಂತೆ ತೋರುತ್ತದೆ. ಹೋದ ವರ್ಷ 1957-58ರ ಬಡ್ಜೆಟ್ಟಿನಲ್ಲಿ ಎರಡು ಲಕ್ಷ

(ಶ್ರೀ ಪಿ. ಜಿ. ಸಿದ್ಧಾಂತಿ)

ಎರಡು ಸಾವಿರ ರೂಪಾಯಿಗಳನ್ನು ಬೆಳಗಾಂ ಡಿವಿಜನ್ನಿಗೆ ಖರ್ಚಿಗೆ ಎಂದು ಹಾಕಿದ್ದರು ಆದರೆ ಅದನ್ನು ಖರ್ಚು ಹಾಕಲಿಲ್ಲ. ಏಕೋ, ಏನೋ, ಒಂದು ಪೈಸೆ ಸಹಿತ ಕೊಟ್ಟಿಲ್ಲ. ಅಂದಬಳಿಕ ಬೆಳಗಾಂ ಡಿವಿಜನ್ನಿಗೆ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದರೂ, ಅದು ಏನಾಗಿದೆ ಎನ್ನುವುದು ಗೊತ್ತಿಲ್ಲ. ಈಸಲ ಮಾತ್ರ 3,20,000 ರೂಪಾಯಿಗಳನ್ನು ಖರ್ಚಿಗೆ ಹಾಕಿದ್ದಾರೆ. ಇದನ್ನು ಯಾವ ರೀತಿ ಖರ್ಚು ಮಾಡುತ್ತಾರೆ ಎನ್ನುವುದು ಗೊತ್ತಿಲ್ಲ. ಈ ಪ್ರಕಾರದ ಸ್ಥಿತಿ ಇದೆ. 1953ರ ಕಾಯಿದೆ ಪ್ರಕಾರ ಎಷ್ಟೆಷ್ಟು ಪರಿಹಾರ ಕೊಡಬೇಕೆಂದು ಆಗಿದೆ. ಇದನ್ನು ಏಕೆ ಅಮಲಿನಲ್ಲಿ ತರಲಿಲ್ಲವೋ ಎಂದು ಅನ್ನಿಸುತ್ತದೆ.

ನಾನು ಬಿಜಾಪುರ ಜಿಲ್ಲೆಯಿಂದ ಬಂದಿರುವುದರಿಂದ ಆ ಜಿಲ್ಲೆಯ ವಿಚಾರವಾಗಿ ಹೇಳುವುದೇನೆಂದರೆ, 85 ಸಾವಿರ ಎಕರೆ ಭೂಮಿಗೆ ಕಂದಾಯದ ಆರುಪಟ್ಟು ತುಂಬಿಲ್ಲ. ಇನಾಂದಾರರು ಏಕೆ ತುಂಬಿಲ್ಲವೆಂದರೆ ಭೂಮಿ ಖಾಯಂಕುಳಗಳ ಎಂದರೆ ಖಾಯಂ ಗೇಣೀದಾರರ ಕೈಯಲ್ಲದೆ. ಅವರುಗಳು ಸರ್ಕಾರಕ್ಕೆ ಕಂದಾಯ ಕೊಡುತ್ತಿದ್ದಾರೆ. ಇದನ್ನು ಬಿಟ್ಟು ಉಳಿದ ಜಮೀನು ಮಾತ್ರ ಇನಾಂದಾರರಿಗೆ ನಿಲ್ಲುತ್ತದೆ. ಕಂದಾಯ ಕೊಡಬೇಕು ಎಂದು ಮಾಡಿರುವುದರಿಂದ ಕಂದಾಯ ಮಾತ್ರ ಕೊಡುತ್ತಿದ್ದಾರೆ. ಇನಾಂದಾರರಿಗೆ ಫಾಯಿದೆ ಇಲ್ಲದೆ ಇರುವುದರಿಂದ ಅವರು ಕಂದಾಯದ ತರಿ ಪಟ್ಟನ್ನು ಇನ್ನೂ ಕೊಟ್ಟಿಲ್ಲ. 1827ನೆಯ ಇಸವಿಯಿಂದ ಯಾರಾದರೂ ಇನಾಂದಾರರು ಜಮೀನನ್ನು ಮತ್ತೊಬ್ಬರಿಗೆ ಮಾರಾಟ ಮಾಡಿದ್ದರೆ, ಆ ಜಮೀನು ಸಂಬಂಧವಾಗಿ ಇನಾಂದಾರರಿಗೆ ಫಾಯಿದೆ ಇದ್ದಿಲ್ಲ, ಲಾಭವಿದ್ದಿಲ್ಲವಾದ ಕಾರಣ ಅದರ ಬಗ್ಗೆ ಕಂದಾಯದ ಆರು ಪಟ್ಟು ಅವರೂ ಕೊಟ್ಟಿಲ್ಲ. ಇಂಥದ್ದರಲ್ಲಿ ಕೆಲವು ಕಡೆ ಬಡಿದಾಟ ನಡೆದಿದೆ. ಯಾರು ಮಾರಾಟಕ್ಕೆ ತೆಗೆದುಕೊಂಡರೋ ಅವರಿಗೆ ತಂಟೆ ನಡೆದಿದೆ. ಅದರ ಸಂಬಂಧ ಇಲ್ಲಿ ಮಾತನಾಡುವುದಿಲ್ಲ. ಸರ್ಕಾರದವರು ಏನು ಕಾಯಿದೆ ಮಾಡಿದ್ದಾರೆ ಆ ಕಾಯಿದೆಯ ಪರಿಣಾಮದಿಂದ ಮುಳ್ಳಿಯಾಗಿದೆ. ಬಿಜಾಪುರ ಜಿಲ್ಲೆಯೊಂದರಲ್ಲಿ 85 ಸಾವಿರ ಎಕರೆ ಖಾಯಂ ಕುಳಗಳಿಗೆ ಸೇರಿದೆ.

ಈ ಖಾಯಂ ಕುಳಗಳು ಇವತ್ತಿನದಿವಸ ತಮ್ಮ ಜಮೀನು ಏನು ಮಾಡುತ್ತಾರೋ ಏನೋ, ತಮ್ಮ ಜಮೀನು ಎಲ್ಲಿ ಹೋಗುತ್ತದೆಯೋ ಎಂದು ಅನುಮಾನ ಪಡುತ್ತಿದ್ದಾರೆ. ಇನ್ನೂ ಅಲ್ಲಿಯ ಸರ್ಕಾರದವರು ಯಾವುದೂ ಹುಕ್ಕುಂ ಮಾಡಿಲ್ಲ. ಈ ಸರ್ಕಾರ ಏನು ಮಾಡುತ್ತದೆಂದು ನೋಡುವುದಾದರೆ, ಇದುವರೆಗೂ ಯಾವ ಕಾನೂನನ್ನೂ ಈ ಬಗ್ಗೆ ಮಾಡಿಲ್ಲ. ಇದನ್ನೇಕೆ ಹೇಳುತ್ತಿದ್ದೇನೆಂದರೆ, ಮುಂಬೈ ಸರ್ಕಾರದವರು ಖಾಯಂ ಕುಳಗಳ ವಿಷಯದಲ್ಲಿ ಕಂದಾಯದ ಆರರಷ್ಟು ಕೊಡಬೇಕೆಂದು ಮಾಡಿದ್ದಾರೆ. ಅದೆ, 1827ನೆಯ ಇಸವಿಗಿಂತ ಮುಂದೆ ತೆಗೆದುಕೊಂಡ ಖರೀದಿದಾರರು ಕಂದಾಯದ 26 ರಷ್ಟು ಕೊಡಬೇಕೆಂದು ಮಾಡಿದ್ದಾರೆ. ನಾವು ಇಲ್ಲಿಗೆ ಬರುವ ಮುನ್ನ ಒಂದು ಬೇರೆ ಹೇಳಿಕೆ ಕೊಟ್ಟರು. ಜಮೀನ್ದಾರರು ಯಾರ್ಯಾರು ಖರೀದಿಗೆ ತೆಗೆದುಕೊಂಡಿದ್ದಾರೋ ಅವರಿಗೆ ಜಮೀನಿನ ಕಿಮ್ಮತ್ತು ಕೊಡಬೇಕೆಂದು ಮಾಡಿದ್ದೇವೆ ಎಂದು. ಇದು ಬಹಳ ಅನ್ಯಾಯ. ಈಗ ಕಿಮ್ಮತ್ತು ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ನನ್ನ ಸಲಹೆಯೇನೆಂದರೆ, ಸರ್ಕಾರದವರು ಎಂಟು ವರ್ಷಗಳ ತನಕ ಕುಳಿತು ಇನ್ನೂ ಏನೂ ಮಾಡದಿದ್ದರೆ ಏನು ಪ್ರಯೋಜನ! ಸರ್ಕಾರಕ್ಕೆ ಉತ್ಪತ್ತಿ ಕೂಡ ಬರುತ್ತಿತ್ತು. 1958-59 ರಲ್ಲಿ ಸರ್ಕಾರದವರು ಯಾವ ಧೋರಣೆ ತೆಗೆದುಕೊಂಡಿದ್ದಾರೋ ಅದನ್ನು ಈ ನಭೆಯ ಮುಂದಾದರೂ ಇಟ್ಟರೆ ಒಳ್ಳೆಯದು.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವಿದೆ. ಬೊಂಬಾಯಿ ಇನಾಂ ರದ್ದಿಯಾತಿ ಕೆಲವು ಕಾಯಿದೆಗಳಲ್ಲಿ ಖಾಯಂ ಕುಳಗಳಿದ್ದವರನ್ನು ಹಿಡುವಳಿದಾರರು ಗಳೆಂದು ಹೇಳಬೇಕೆಂದು ಹೇಳಿ ಅವರು ಕಂದಾಯದ ಮೂರರಷ್ಟು ಕೊಡಬೇಕೆಂದು ಮಾಡಿದ್ದಾರೆ. ಆದರೆ ಟೆನೆನ್ಸಿ ಕಾನೂನಿನಲ್ಲಿ ಅವರು ಕಂದಾಯದ ಆರರಷ್ಟು ಕೊಡಬೇಕೆಂದು ಮಾಡಿದ್ದಾರೆ. ಈಗ ಇವುಗಳ ಭೇದದ ಅವಶ್ಯಕತೆಯಿಲ್ಲ. ಆದ್ದರಿಂದ ತಾವು ಏನಾದರೂ ಒಂದು ತರಾವು ಪಾನುಮಾತಿ ಅದರಂತೆ ವಸೂಲು ಮಾಡಿದರೆ ಜಮೀನ್ದಾರರಿಗೆ ಅನುಕೂಲವಾಗುತ್ತದೆ. ಸರ್ಕಾರದವರು ಬೇಗ ಒಂದು ಹುಕ್ಕುಂ ಸಾದರು ಮಾಡಲೆಂದು ಏನಂತಿ ಮಾಡಿಕೊಳ್ಳುತ್ತೇನೆ.

ಇದರಂತೆ ಸರಂಜಾಮ್‌ದಾರರದು ಒಂದು ವಿಷಯ ಇದೆ. ಅವರ ಸಂಬಂಧವಾಗಿ ಕೂಡ ಒಂದು ಹುಕ್ಕುಂ ಬೇಗ ಮಾಡಬೇಕು. ಇದು 1953ನೆಯ ಇಸವಿಯಲ್ಲಿ ಮಾಡಬೇಕಾಗಿದ್ದುದು; ಇದನ್ನು ಮಾಡಿದ್ದರೆ ರೈತರಿಗೆ ಎಷ್ಟೋ ಅನುಕೂಲವಾಗುತ್ತಿತ್ತು ಎಂದು ಹೇಳಿ ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಸಭಾಪತಿಗಳೇ, ಇಂದು ನಮ್ಮ ಮುಂದಿರುವ ಮೂರು ಬೇಡಿಕೆಗಳನ್ನೂ ನಾನು ಬಹು ಮಟ್ಟಿಗೆ ವಿರೋಧ ಮಾಡಬೇಕಾಗಿದೆ. ಏಕೆಂದರೆ ಆಡಳಿತದಲ್ಲಿ ಮೊದಲನೆಯದಾಗಿ ರೆವಿನ್ಯೂ ಆಡಳಿತದಲ್ಲಿ ಯಾವ ತೆರನಾದ ಪ್ರಗತಿಯನ್ನೂ ನಾವಿಂದು ನೋಡುತ್ತಿಲ್ಲ. ಮತ್ತು ಇರುವ ಆಡಳಿತವೂ ಹಿಂದಿನಷ್ಟಾದರೂ ಚೆನ್ನಾಗಿಲ್ಲ. ಲಂಚವೆನ್ನುವುದು ಈ ಇಲಾಖೆಯಲ್ಲಿ ಇತರ ಯಾವ ಇಲಾಖೆಗೆ ಹೋಲಿಸಿದರೂ ಕೂಡ ಎಲ್ಲಕ್ಕಿಂತಲೂ ಜಾಸ್ತಿಯಾಗಿದೆಯೆಂದೇ ಹೇಳಬೇಕು. ಸೆಕ್ರಟೇರಿಯಟ್ಟಿನಿಂದ ಹಿಡಿದು ಗ್ರಾಮಗಳಲ್ಲಿನ ಪಟೇಲ್ ಶ್ಯಾನುಭೋಗರುಗಳವರೆಗಿನ ಕೆಲಸಗಳಲ್ಲಿ ಎಲ್ಲಿ ನೋಡಿದರೂ ಲೋಪದೋಷಗಳೇ ಕಂಡುಬರುತ್ತಿವೆ. ಏನೋ ಅಧಿಕಾರಿಗಳ ವರ್ತನೆಗಳು ನ್ಯಾಯದಿಂದ ನಿಷ್ಠೆಯಿಂದ ಕೂಡಿವೆಯೇ, ಅವರಿಂದ ಕೆಲಸ ನಡೆಯುತ್ತಿವೆಯೇ, ಎಂದು ಕೇಳಿದರೆ ಅಲ್ಲಿಯೂ ಇಲ್ಲವೆಂದು ಹೇಳಬೇಕಾಗಿದೆ, ರೆವಿನ್ಯೂ ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ 13 ಜನ ಸರ್ವೇಯರುಗಳನ್ನು ಗೆಜೆಟೆಡ್ ಹುದ್ದೆಗೆ ಪ್ರಮೋಟ್ ಮಾಡಿದ್ದಾರೆ. ಈ ಸರ್ಕಾರಿ ಹುಕ್ಕುಂ ನೋಡಿದರೆ, ಯಾರು ಟೆಸ್ಟಿನಲ್ಲಿ ಪಾನು ಮಾಡಿದ್ದಾರೋ ಅಂಥವರಿಗೆ ಗೆಜೆಟೆಡ್ ಹುದ್ದೆ ಪ್ರಮೋಷನ್ ಕೊಡುವುದಿರಲಿ, ಯಾರಿಗೆ ರೆವಿನ್ಯೂ ಸರ್ವೇಯರುಗಳಾಗಿ S.S.L.C. training ಮಾತ್ರ ಆಗಿದೆಯೋ ಅವರಿಗೆ ಸರ್ಕಾರಿ ಆರ್ಡರಿಗೆ ವಿರೋಧವಾಗಿ ಪ್ರಮೋಷನ್ ಕೊಟ್ಟಿದ್ದಾರೆಂದರೆ ಹೇಗೆ !! P.W.D. ಇಲಾಖೆಯಲ್ಲಿ ಹತ್ತಾರು ವರ್ಷ ಕೆಲಸಮಾಡಿ, ಹತ್ತಾರು ವರ್ಷ ಡ್ರೈಯಿಂಗ್ ಪಡೆದು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದವರಿದ್ದರೂ ಅಂಥವರಿಗೆ ಗೆಜೆಟೆಡ್ ಹುದ್ದೆಗಳನ್ನು ಕೊಡದೆ ಇಲ್ಲಿ S.S.L.C. ಮಾಡಿದವರಿಗೆ ಪ್ರಮೋಷನ್ ಕೊಡುವುದೆಂದರೆ ಇನ್ನು efficiency ಇರುತ್ತದೆಯೇ ? ವಿದ್ಯೆಯಿರುವವರಿಗೆ ಎಷ್ಟರ ಮಟ್ಟಿನ ಅತ್ಯಪ್ತಿಯುಂಟಾಗುತ್ತದೆಂಬುದನ್ನು ನೀವೇ ಯೋಚನೆ ಮಾಡಬಹುದು.

ಶ್ರೀ ಎಂ. ಪಿ. ಪಾಟೀಲ್.—ಹೊಸ ಪಟ್ಟಿಯನ್ನು ಇನ್ನೂ ಮಾಡುತ್ತಿದ್ದೇವೆ. Final list ಇನ್ನೂ ಆಗಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈಗ ಪ್ರಪೋಟ್ ಮಾಡಿರುವುದು temporaryಯೆಂದೇನೋ ಹೇಳುತ್ತಾರೆ. Temporary ಪಟ್ಟಿಯಲ್ಲವೆ, ಹಿಂದಿನ ಲಸ್ಟ್ ಇದೆಯೆಂತಲೇ ಹೇಳೋಣ. ಅದರಲ್ಲಿ 20-30 ಜನ ಇರುವಾಗ ಮೇಲಿನವರನ್ನು ಬಿಟ್ಟು ಕೆಳಗಿನ 10—12 ಜನರನ್ನು promote ಮಾಡಿದರೆ, ಏನೋ ಜಾತಿಭೇದಬಿಟ್ಟುಕೊಂಡು ತಮ್ಮ ನೆಂಟರಿಷ್ಟರನ್ನು ಮೇಲಕ್ಕೆ ಎತ್ತಬೇಕೆಂದು ಮಾಡಿದ್ದಾರೆಂದು ಗೊತ್ತಾಗುವುದಿಲ್ಲವೇ? ಈವೊತ್ತು ವಿದ್ಯಾಮಟ್ಟ ಹೇಗಿದೆ? ತಿಳಿದಿದ್ದೀರಾ? ಕೇವಲ ಎಸ್.ಎಸ್.ಎಲ್.ಸಿ.ಯನ್ನು ಗೆಜೆಟೆಡ್ ಹುದ್ದೆಗೆ promote ಮಾಡಿದರೆ, ಖಂಡಿತವಾಗಿ ದಕ್ಷರಿಗೆ, ನಿಷ್ಠುರಾಗಿ ಕೆಲಸ ಮಾಡಿದವರಿಗೆ, ನಾಕಷ್ಟು ವಿದ್ಯಾವಂತರಾಗಿರುವವರಿಗೆ ಎಷ್ಟು ಖೇದವುಂಟಾಗುತ್ತದೆ, ಯೋಚನೆಮಾಡಿ.

*ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಮಾನ್ಯ ಅಧ್ಯಕ್ಷರೇ, ನಮ್ಮ ಒಪ್ಪಿಗೆಗೋಸ್ಕರವಾಗಿ ಈ ದಿವಸ ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳಲ್ಲಿರತಕ್ಕ ಹಣವನ್ನು ನಾವು ಅಷ್ಟಾಗಿ ಒಪ್ಪಿಕೊಳ್ಳತಕ್ಕ ಅಗತ್ಯವಿಲ್ಲ ಎಂಬ ಬಗ್ಗೆ ನಾನೀಗ ಒಂದೆರಡು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ರಾಜ್ಯ ಪುನರ್ವಿಂಗಡಣೆಯಾಗಿ ಹದಿನೆಂಟು ತಿಂಗಳುಗಳು ಕಳೆದು ಹೋಗಿದ್ದಾಗ್ಯೂ ಮೈಸೂರು ರಾಜ್ಯದಲ್ಲಿ ಒಂದು ಸರಿಯಾದ ಸಮನ್ವಯ ರೀತಿಯಲ್ಲಿ ಕಂದಾಯದ ಪದ್ಧತಿಯನ್ನು ಜಾರಿಗೆತರಲು ಸಾಧ್ಯವಾಗಿಲ್ಲ. ರಾಜ್ಯದ ಒಂದೊಂದು ಭಾಗದಲ್ಲಿ ಇದು ಒಂದೊಂದು ರೀತಿಯಾಗಿದೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಜವಾಬು ಹೇಳುತ್ತಾರೋ ನಾನು ಕಾಣೆ. ಆದರೆ ಮಾನ್ಯ ಮಂತ್ರಿಗಳು ಈ ರಾಜ್ಯ ಪುನರ್ವಿಂಗಡಣೆಯಿಂದ ಅನೇಕ ಹೊಸ ಹೊಸ ಸಮಸ್ಯೆಗಳು ಉದ್ಭವವಾದುದರಿಂದ ಈ ಕಾರ್ಯವನ್ನು ಮಾಡಲಕ್ಕಾಗಲಿಲ್ಲವೆಂದು ಬಹುಶಃ ಹೇಳುವುದಕ್ಕೆ ತಯಾರಿರಬಹುದು. ಆದರೆ ನಾನು ಕೇಳುತ್ತೇನೆ. ಬಳ್ಳಾರಿ ಪ್ರದೇಶ ಹಳೆಯ ಮೈಸೂರಿದ್ದಾಗಲೇ ಸೇರಿ ಇಲ್ಲಿಗೆ ನಾಲ್ಕು ವರ್ಷಗಳಮೇಲಾಯಿತು. ಅಲ್ಲಯಾದರೂ ಈ ಒಂದು ವ್ಯತ್ಯಾಸವನ್ನು ಸರಿಪಡಿಸತಕ್ಕ ಬಗ್ಗೆ ಏನಾ ಪ್ರಯತ್ನವನ್ನು ಪಟ್ಟಿದ್ದಾರೆಂದು ನಾನು ಈಗ ಕೇಳುತ್ತೇನೆ! ಲ್ಯಾಂಡ್ ರೆವಿನ್ಯೂ ಬಾಬಿನಿಂದ ಬರತಕ್ಕ ವರಮಾನ 458 ಲಕ್ಷ ರೂಪಾಯಿಗಳು. ಈ ಬಾಬಿಗೆ ವೆಚ್ಚಮಾಡುತ್ತಿರುವ ಹಣ 152 ಲಕ್ಷ ಚಿಲ್ಲರೆ ರೂಪಾಯಿಗಳು. ಎಂದರೆ ಈ ಬಾಬಿನಿಂದ ಬರತಕ್ಕ ಉತ್ಪತ್ತಿಯಲ್ಲಿ ಶೇಕಡ 33ರಷ್ಟು ಹಣವನ್ನು ಈ ಬಾಬಿಗೆ ಖರ್ಚು ಮಾಡುತ್ತಿರುವಂತೆ ಕಂಡುಬರುತ್ತಿದೆ. ಆದರೆ ಇದು ರಾಜ್ಯವನ್ನು ಪ್ರಗತಿಗೆ ತರತಕ್ಕಂಥ ಒಂದು ಶುಭ ಸೂಚನೆಯೆಲ್ಲವೆಂದು ಹೇಳುತ್ತೇನೆ. ದೇಶದ ಆದಾಯದಲ್ಲಿ ಒಂದು ಶುಭಸೂಚನೆ ಕಂಡುಬರುತ್ತಿದ್ದಾಗ್ಯೂ ದೇಶದ ಪ್ರಗತಿಗಾಗಿ ಖರ್ಚು ಮಾಡತಕ್ಕ ಬಾಬಿನಲ್ಲಿ ಅಂಥ ಶುಭಸೂಚನೆಗಳೇನೂ ಕಂಡುಬರುತ್ತಿಲ್ಲ. ಆದರೆ ಮಾನ್ಯ ಮಂತ್ರಿಗಳು ಆಡಳಿತದ ಬಗ್ಗೆ ಆಗತಕ್ಕ ಖರ್ಚನ್ನು ಕಡಮೆಮಾಡಬೇಕೆಂಬ ಉದ್ದೇಶದಿಂದ ಈ ರೀತಿ ಒಂದು ಪ್ರಯತ್ನ ಮಾಡಿರುತ್ತೇವೆಂದು ಹೇಳಬಹುದು. ಇದಕ್ಕೆ ಕಾರಣವೇ ಬೇರೆ ಇದೆ. ಈ ದಿವಸ ನಮ್ಮ ಮೈಸೂರು ರಾಜ್ಯದಲ್ಲಿ ಕಂದಾಯದ ಬಾಕಿ ಬಹಳ ಜಾಸ್ತಿ ನಿಂತಿದೆ. ಮೇಲಾಗಿ ಜಾರಿಯಲ್ಲಿರತಕ್ಕ ಕಂದಾಯ ಬಹಳ ಕಡಮೆ ಎಂದು ಹೇಳುತ್ತೇನೆ. ನಮ್ಮ ಪಕ್ಕದ ಪ್ರಾಂತ್ಯವಾದ ಮದ್ರಾಸ್ ರಾಜ್ಯದಲ್ಲಿ ಇದು ಯಾವರೀತಿ ಎನ್ನುವುದನ್ನು ನೋಡುವುದಾದರೆ ಅಲ್ಲಿ ಅವಧಿ ಪೂರ್ಯೆನುವುದರೊಳಗಾಗಿ ಸರ್ಕಾರಕ್ಕೆ ಜಮಿನು ಸಂಬಂಧವಾಗಿ ಪಾವತಿಯಾಗಬೇಕಾಗಿರತಕ್ಕ ಕಂದಾಯದ ಹಣವೆಲ್ಲ ಪೂರಾ ಪಾವತಿಯಾಗಿರುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಇಷ್ಟೊಂದು ಬಾಕಿ ನಿಲ್ಲುವುದಕ್ಕೆ ಕಾರಣವಾದರೂ ಏನಿದೆ ಎನ್ನುವುದನ್ನು ನಾನೀಗ ನೋಡಬೇಕಾಗಿದೆ. ಈ ಕಂದಾಯದ ವಸೂಲಿಯಲ್ಲಿ ಪಟೇಲ್ ಶ್ಯಾನುಭೋಗರೇನಾದರೂ ತಮ್ಮ ಕರ್ತವ್ಯ ಲೋಪ ಮಾಡಿರುತ್ತಾರೆಯೇ, ಅಥವ ಅವರೇನಾದರೂ ತಮ್ಮ ಅಧಿಕಾರವನ್ನು ಸರಿಯಾಗಿ ನಡೆಸುತ್ತಿಲ್ಲವೇ, ಅಥವಾ ಸರ್ಕಾರದವರಿಗೇನಾದರೂ ಆ ನೌಕರರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲವೇ ಎನ್ನತಕ್ಕ ಅಂಶಗಳನ್ನೀಗ ನಾವು ಪರಿಶೀಲನೆ ಮಾಡಬೇಕಾಗಿದೆ. ಆದರೆ ಈ ವಿಚಾರದಲ್ಲಿ ನನ್ನ ಒಂದು ಅಭಿಪ್ರಾಯವೇನಿದೆಯೆಂದರೆ ಗ್ರಾಮಾಧಿಕಾರಿಗಳ ವಂಶಪಾರಂಪರ್ಯವಾದ ಒಂದು ಹಕ್ಕಿನ ಅಧಿಕಾರವನ್ನೇನಿದೆ ಅದು ಮೊದಲು ಹೋಗಬೇಕು.

Sri M. P. PATIL.—There are not heavy arrears in old Mysore area.

Sri G. VENKATAI GOWDA.—Not in any part of the State?

Sri M. P. PATIL.—Hon'ble Members may be aware that a question was asked in the Houses and the figures were supplied to the members. The arrears are heavy in Hyderabad.

ಶ್ರೀ ಜಿ. ವೆಂಕಟೇಗೌಡ.—ಎಂದರೆ ಪಟೇಲ್ ಶ್ಯಾನುಭೋಗರ ಕೆಲಸವನ್ನು ಮತ್ತು ಅವರ ಅಧಿಕಾರವನ್ನು ಇನ್ನೂ ಸರಿಪಡಿಸದೆ ಇರುವುದರಿಂದ ಈ ನ್ಯೂನತೆಗಳೆಲ್ಲ ತಲೆದೋರಲು ಕಾರಣವಾಗಿರುತ್ತದೆ ಎಂದು ನನಗನಿಸುತ್ತಿದೆ. ಆದರೆ ಇವರ ಈ ಅಧಿಕಾರವನ್ನು ಹೇಗೆ ಮುಂದುವರಿಸಿಕೊಂಡು ಹೋಗುತ್ತಿರುವುದರಲ್ಲಿ ಅರ್ಥವಿಲ್ಲ. ಹಿಂದಿನ ಪ್ರಭುತ್ವ ಈಗಿಲ್ಲ. ಈಗ ಪ್ರಭುತ್ವ ಬದಲಾವಣೆಯಾಗಿದೆ. ಈ ಬದಲಾವಣೆಗೆ ತಕ್ಕಂತೆ ಈ ಅಧಿಕಾರಿಗಳನ್ನು ಬದಲಾಯಿಸತಕ್ಕ ವಿಚಾರಕ್ಕೆ ಸರ್ಕಾರ ಅಷ್ಟಾಗಿ ಗಮನ ಕೊಟ್ಟಿಲ್ಲ. ಈಗಿನ ಕಾಲಕ್ಕೆ ಹಿಂದಿನಕಾಲದ ಪದ್ಧತಿ ಅನುಗುಣವಾಗಿರುವುದಿಲ್ಲ. ಇನ್ನು ಜಮಿನು ವಿಲೇವಾರಿ ವಿಚಾರಕ್ಕೆ ಬಂದರೆ ಈ ದಿವಸ ನಮ್ಮ ರಾಜ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾದಂಥ ಭೂಮಿ ಅನೇಕ ಕಡೆ ಪಾಳು ಬಿದ್ದಿದೆ. ನಾವು ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ಮಾಡುವಾಗ ದಾರಿ ಉದ್ದಕ್ಕೂ ವಿಶೇಷವಾಗಿ ಪಾಳು ಬಿದ್ದಿರತಕ್ಕ ಬಂಜರ್ ಭೂಮಿಯನ್ನು ನಾವು ಕಾಣಬಹುದು. ಆ ಭೂಮಿಯನ್ನೆಲ್ಲ ಆಬಾದ್‌ಮಾಡಿ ವ್ಯವಸಾಯಕ್ಕೆ ಉಪಯೋಗಿಸಿಕೊಂಡರೆ ಭೂಮಿಯಿಲ್ಲದ ರೈತರಿಗೆ ಭೂಮಿ ಸಿಕ್ಕಿದಂತೆ ಆಗುವುದೇ ಅಲ್ಲದೆ ಅದರಿಂದ ಸರ್ಕಾರಕ್ಕೂ ಕೂಡ ಒಂದು ಹೆಚ್ಚಿನ ವರಮಾನ ಬರುತ್ತದೆ. ಈ ದಿವಸ ಅಲ್ಲೆಲ್ಲ ಅಷ್ಟೊಂದು ಜಮಿನು ಏಕೆ ಪಾಳು ಬಿದ್ದಿದೆ ಎಂಬುದನ್ನು ಪರಿಶೀಲನೆ ಮಾಡಿ ಹಾಗೊಂದುವೇಳೆ ಆ ಜಮಿನು ಯಾವ ರೈತನಿಗಾದರೂ ಸೇರಿದ್ದಪಕ್ಷದಲ್ಲಿ ಆತನು ಇಂತಿಷ್ಟು ಕಾಲದೊಳಗೆ ಆ ಜಮಿನನ್ನು ಆಬಾದು ಮಾಡಬೇಕೆಂದು ಆತನಿಗೆ ಒಂದೆರಡಾವರ್ತಿ ನೋಟೀಸುಗಳನ್ನು ಕೊಟ್ಟು ಹಾಗೂ ಅವನು ಆ ಬಗ್ಗೆ ನೂಕ್ತ ಎಚ್ಚರಿಕೆ ತೆಗೆದುಕೊಳ್ಳದೆ ಹೋದರೆ ಅಂಥ ಜಮಿನನ್ನು ಸರ್ಕಾರ ವಶಪಡಿಸಿಕೊಂಡು ಆ ಜಮಿನನ್ನು ಬೇರೆ ಭೂಮಿಯಿಲ್ಲದ ಜನರಿಗೆ ವ್ಯವಸಾಯ ಮಾಡುವುದಕ್ಕೆ ಕೊಡಲು ಕಾನೂನಿನಲ್ಲಿ ಅವಕಾಶವಿದೆ. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ಕೂಡಲೇ ನೂಕ್ತರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ. ಇಷ್ಟನ್ನು ಮಾಡತಕ್ಕದ್ದು ಅತ್ಯಗತ್ಯ. ಇನ್ನು

(ಶ್ರೀ ಜಿ. ವೆಂಕಟೇಗೌಡ)

ಹಳೆಯ ಮೈಸೂರಿನ ಭಾಗದಲ್ಲಿರತಕ್ಕ ಪಟೇಲ್ ಶ್ಯಾನುಭೋಗರುಗಳಿಂದ ಆಗಬೇಕಾದಂಥ ಕೆಲಸ ಕಾರ್ಯಗಳು ಸರಿಯಾಗಿ ಆಗುತ್ತಿಲ್ಲ. ಆದುದರಿಂದ ಈ ವಂಶಪಾರಂಪರ್ಯವಾಗಿ ನಡೆದುಕೊಂಡು ಬರುತ್ತಿರುವ ಪದ್ಧತಿ ರದ್ದಾಗಬೇಕು. ಆ ಸ್ಥಾನದಲ್ಲಿ ಸರಿಯಾಗಿ ಸಂಬಳ ಸಾರಿಗೆಗಳನ್ನು ಕೊಟ್ಟು ಸರಿಯಾಗಿ ಕೆಲಸ ಮಾಡತಕ್ಕ ಅಧಿಕಾರಿಗಳನ್ನು ನೇಮಿಸಬೇಕಾದದ್ದು ಅತ್ಯವಶ್ಯಕ. ಹಾಗೆ ಮಾಡಿದರೆ ಆಗ ಈ ಗ್ರಾಮಾಧಿಕಾರಿಗಳ ಕೈವಾಡ ಗ್ರಾಮಾಭಿವೃದ್ಧಿಯ ವಿಚಾರದಲ್ಲಿ ಹೆಚ್ಚಾಗುವುದಕ್ಕೆ ಒಂದು ದಾರಿಯಾಗುತ್ತದೆ. ಆದರೆ ಆ ರೀತಿ ಕೆಲಸಗಳು ನಡೆಯುವುದಕ್ಕೆ ಈ ದಿವಸ ಅವಕಾಶವಿಲ್ಲ. ಆದ್ದರಿಂದಲೇ ಈ ಕೆಲಸಗಳೊಂದೂ ಈ ದಿವಸ ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ಈ ದಿವಸ ಅಂಥ ಒಂದು ವಾತಾವರಣವನ್ನು ಸರ್ಕಾರದವರು ಕಲ್ಪಿಸುವುದಕ್ಕೆ ಪ್ರಯತ್ನವನ್ನು ಕೂಡಲೇ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನು ರೆವಿನ್ಯೂ ಸಬ್ ಡಿವಿಜ್‌ಗಳ ವಿಚಾರ ತೆಗೆದುಕೊಂಡರೆ ಇವುಗಳನ್ನು ಒಂದು ನೀತಿಯ ಆಧಾರದಮೇಲೆ ಸರಿಯಾಗಿ ವ್ಯವಸ್ಥೆ ಮಾಡದೇ ಇರುವುದರಿಂದ ಇವುಗಳೂ ಕೂಡ ಜನರಿಗೆ ಅನುಕೂಲ ಆಗತಕ್ಕ ರೀತಿಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ದಿವಸ ಈ ಸಬ್‌ಡಿವಿಜ್‌ಗಳು ಆಯಾಯ ಪ್ರದೇಶದ ಕಂದಾಯದ ವಸೂಲಿ ಬಗ್ಗೆ ಏನು ಕಾರ್ಯನಡೆಸಬೇಕೋ ಅಷ್ಟನ್ನು ಮಾತ್ರ ನಡೆಸಿಕೊಂಡು ಹೋಗುತ್ತಿವೆ. ಈ ದಿವಸ ಮೈಸೂರಿನಲ್ಲಿ ಒಂದು ಸಬ್-ಡಿವಿಜ್ ಇದ್ದರೆ ಅಲ್ಲೇ ಪಕ್ಕದಲ್ಲಿ ನಂಜನಗೂಡಿನಲ್ಲಿ ಮತ್ತೊಂದು ಸಬ್-ಡಿವಿಜ್ ಇದೆ. ಇಂಥ ರೆವಿನ್ಯೂ ಸಬ್-ಡಿವಿಜನ್ನನ್ನು ಯಾವತ್ತೂ ಎಲ್ಲ ಗ್ರಾಮಗಳಿಗೂ ಯಾವುದು ಮಧ್ಯ ಪ್ರದೇಶವಾಗಿರುತ್ತದೋ ಅಂಥ ಸ್ಥಳದಲ್ಲಿ ಇಡತಕ್ಕದ್ದು ಒಳ್ಳೆಯದು ಮತ್ತು ಸೂಕ್ತವಾದದ್ದು. ಹಾಗೆ ಮಾಡಿದರೆ ಜನರಿಗೆಲ್ಲ ತುಂಬ ಅನುಕೂಲವಾಗುವುದು. ಈ ಹಿಂದೆ ಕೊಳ್ಳೇಗಾಲ ಮದ್ರಾಸ್ ಪ್ರಾಂತಕ್ಕೆ ಸೇರಿದ್ದಾಗ ಅಲ್ಲಿ ಒಂದು ಸಬ್-ಡಿವಿಜ್ ಇಡಲಾಗಿತ್ತು. ಈ ದಿವಸ ಆ ಪ್ರಾಂತದ ಜನರು ಈ ಆಫೀಸಿಗೆ ಬರಬೇಕಾದರೆ ಸುಮಾರು 50 ಮೈಲಿ ದೂರವಾಗುತ್ತದೆ. ಇದು ನಮ್ಮ ಸ್ಟೇಟ್ ಬಾರ್ಡರಿನಲ್ಲಿರುತ್ತದೆ. ಆದರೆ ರೈತರಿಗೆಂದೂ ಸರ್ಕಾರ ಇಂಥ ಕಷ್ಟವನ್ನು ಕೊಡಬಾರದು. ಹಿಂದೆ ಇದ್ದಂಥ ಪರಿಸ್ಥಿತಿಗೂ ಈಗಿರತಕ್ಕ ಪರಿಸ್ಥಿತಿಗೂ ತುಂಬ ವ್ಯತ್ಯಾಸವಾಗಿದೆ. ಈಗಿರತಕ್ಕ ಸರ್ಕಾರದವರು ಆ ಪ್ರದೇಶದ ಜನಗಳಿಗೆ ಯಾವುದೋ ಒಂದು ರೀತಿಯ ಟ್ರೀಟ್‌ಮೆಂಟನ್ನು ಕೊಡುತ್ತಿದ್ದಾರೆ. ಹೀಗೆಲ್ಲಾ ಮಾಡುತ್ತಾ ಹೋದರೆ ಆ ಪ್ರಾಂತ್ಯದ ಜನರಿಗೆ ಈಗಿರತಕ್ಕ ಸರ್ಕಾರದ ಬಗ್ಗೆ ಒಂದು ವಿಶ್ವಾಸ ಬರಲಿಕ್ಕೆ ಅವಕಾಶವಿರುವುದಿಲ್ಲವೆಂದು ಹೇಳುತ್ತೇನೆ. ರೈತರಿಗೆ ಅನುಕೂಲ ಕಲ್ಪಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಯಾವ ಪ್ರದೇಶದ ರೈತರಿಗಾಗಲಿ ಹೀಗೆ ಒಂದು ತೊಂದರೆಯಾಗಬಾರದು. ಈ ದಿವಸ ಆ ಪ್ರದೇಶದ ರೈತರು ನಂಜನಗೂಡಿಗೆ ಬರಬೇಕೆಂದರೆ ಅವರಿಗೆಷ್ಟು ತೊಂದರೆಯಾಗುತ್ತಿದೆ! ರೈತರೇ ದೇಶದ ಬೆನ್ನುಮೂಳೆ ಎಂದು ಹೇಳಿಕೊಳ್ಳುತ್ತ ಈ ರೀತಿ ಅವರನ್ನು ತೊಂದರೆಗೆ ಗುರಿಪಡಿಸಿದರೆ ಸರ್ಕಾರದವರಿಗೆ ಅವರ ವಿಶ್ವಾಸ ಪಡೆಯಲು ಹೇಗೆ ಸಾಧ್ಯವಿದೆ? ಆದುದರಿಂದ ಹಿಂದೆ ಇದ್ದ ಸರ್ಕಾರ ಅಲ್ಲಿ ಏನೇನು ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟಿತ್ತೋ ಅವುಗಳನ್ನು ಈಗಿರತಕ್ಕ ಸರ್ಕಾರವೂ ಕೂಡ ಕಲ್ಪಿಸಿಕೊಡತಕ್ಕದ್ದು ಅಗತ್ಯವೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಂತೂ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇದೆ. ಅನೇಕರಿಗೆ ಈ ದಿವಸ ಅಲ್ಲಿ ಭೂಮಿಯಿಲ್ಲ. ಆದರೆ ವ್ಯವಸಾಯ ಮಾಡತಕ್ಕ ಯಾವ ರೈತನಿಗೆ ಜಮೀನಿಲ್ಲವೋ ಆತನಿಗೆ ಜಮೀನು ಸಿಕ್ಕುತ್ತಿಲ್ಲ. ಯಾರಿಗೆ ಪಟ್ಟೆ ಇದ್ದು ಹೆಚ್ಚು ಜಮೀನಿರುತ್ತದೋ ಅಂಥವರಿಗೇ ಈ ದಿವಸ ಅಲ್ಲಿ ಭೂಮಿ ಸಿಕ್ಕುತ್ತಿದೆ. ಪಟ್ಟಾದಾರರೇ ಬೇರೆಯವರ ಹೆಸರಿನಲ್ಲಿ ಅರ್ಜಿ ಹಾಕಿಸಿ ಜಮೀನು ಪಡೆಯುತ್ತಿದ್ದಾರೆ. ಹೀಗಾಗಿ ಆ ಪಟ್ಟಾದಾರರುಗಳೇ ಆ ಭೂಮಿಗಳನ್ನೆಲ್ಲ 15-20 ವರ್ಷಗಳಿಂದ ಕಂದಾಯ ಕಟ್ಟಿಕೊಂಡು ಅನುಭವಿಸುತ್ತಾ ಬಂದಿದ್ದಾರೆ. ಅಂಥ ಒಂದು ಪದ್ಧತಿಯನ್ನು ಕೂಡಲೇ ತಪ್ಪಿಸಿ ಜಮೀನಿಲ್ಲದ ವ್ಯವಸಾಯಗಾರರಿಗೆ ಆ ಜಮೀನುಗಳು ದೊರೆಯುವಂತೆ ಮಾಡಬೇಕೆಂದು ಸೂಚಿಸುತ್ತೇನೆ. ಈ ಬಗ್ಗೆ ತ್ವರಿತವಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಇನ್ನು ಈ ದಿವಸ ತಹಶೀರ್‌ದಾರರುಗಳಿಗೆ ಕೊಟ್ಟಿರತಕ್ಕ ಅಧಿಕಾರಗಳು ಇನ್ನೂ ಸಾಲದು. ಅವರಿಗೆ ಈ ದಿವಸ 250 ರೂಪಾಯಿಗಳ ಸಾಲವನ್ನು ಮಂಜೂರು ಮಾಡುವುದಕ್ಕೆ ಮಾತ್ರ ಅಧಿಕಾರವಿದೆ. ಇದನ್ನು ಒಂದು ಸಾವಿರಕ್ಕೆ ಹೆಚ್ಚಿಸಬೇಕೆಂದು ಹೇಳುತ್ತೇನೆ. ನಮ್ಮ ಪಕ್ಕದ ಪ್ರಾಂತವಾದ ಮದ್ರಾಸ್ ಸರ್ಕಾರದಲ್ಲಿ ಯಾವ ಒಂದು ಪದ್ಧತಿ ಜಾರಿಯಿಲ್ಲದೆಯೋ ಅದರಂತೆಯೇ ಇಲ್ಲಿಯೂ ಒಂದು ಪದ್ಧತಿಯನ್ನು ಜಾರಿಗೆ ತಂದರೆ ಅನುಕೂಲವಾಗುತ್ತದೆ. ಅಲ್ಲದೆ ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ಸುಮಾರು ಒಂದರಿಂದ ಒಂದೂವರೆ ಲಕ್ಷ ರೂಪಾಯಿಗಳಷ್ಟು ಸಾಲ ಕೊಡುತ್ತಿದ್ದರು. ಆದರೆ ಕಳೆದ ವರ್ಷ ನಮ್ಮ ಮಾನ್ಯ ಸಚಿವರು ಈ ತಾಲ್ಲೂಕಿಗೆ ಇಪ್ಪತ್ತು ಸಾವಿರ ರೂಪಾಯಿಗಳಷ್ಟು ಹಣವನ್ನು ಸಾಲವಾಗಿ ರೈತರಿಗೇನೋ ಕೊಟ್ಟರು. ಅದನ್ನೂ ಕೂಡ ಬಟವಾಡೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದರಿಂದ ಈ ಸಮಸ್ಯೆ ಇಷ್ಟು ಜಟಿಲವಾಗಿದೆ. ಹೀಗಿರುವುದರಿಂದ ಮದರಾಸು ಜಿಲ್ಲೆಯಲ್ಲಿ ಯಾವರೀತಿಯಾದ ನೀತಿ ನಿಯಮಗಳನ್ನು ಅನುಸರಿಸಿ ಸಾಲವನ್ನು ರೈತರಿಗೆ ಒದಗಿಸುತ್ತಿದ್ದರೋ ಅಷ್ಟೇ ಸಾಲದ ಹಣವನ್ನು ಈಗಲೂ ಮಂಜೂರು ಮಾಡುವುದು ಅತ್ಯಾವಶ್ಯಕ. ಈ ರೀತಿ ಮಾಡಿ ಬಡ ರೈತರಿಗೆ ತಕ್ಕಷ್ಟು ಪರಿಹಾರವನ್ನು ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಲ್ಲದೆ ಈ ಗೋಮಾಳದ ಹಂಚುವಿಕೆ ವಿಚಾರದಲ್ಲಿ ಅನೇಕ ನ್ಯೂನಾತಿರಿಕ್ತಗಳಿವೆ. ಈ ಗೋಮಾಳಗಳನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಗ್ರಾಮಗಳಲ್ಲಿ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಇದರ ವಿಷಯವಾಗಿ ಸರಕಾರದವರು ಯೋಚನೆ ಮಾಡಬೇಕು. ಅಲ್ಲದೆ ತಮಗೇ ತಿಳಿದಹಾಗೆ, ಸರಕಾರದ ಅಧಿಕಾರಿಗಳು ಅವರಿಗೆ ಸಂಬಂಧಪಟ್ಟವರಿಗೇ ಗ್ರಾಂಟುಗಳನ್ನು ಕೊಟ್ಟಿದ್ದರೂ ಕೂಡ ಅವರೂ ಜಮೀನನ್ನು ಅಬಾದು ಮಾಡದೆ ಇರುವ ಸನ್ನಿವೇಶಗಳೂ ಇವೆ. ಈ ವಿಷಯವನ್ನು ನಾನಾಗಲೇ ಮಾನ್ಯಸಚಿವರ ಗಮನಕ್ಕೂ ತಂದಿದ್ದೇನೆ. ಅಲ್ಲವೆ ಗೋಮಾಳಗಳಲ್ಲದೇ ಇರುವ ಪ್ರದೇಶಗಳಲ್ಲಿ ಸೂಕ್ತವಾದ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕ್ಷಾಮದ ಪರಿಹಾರಕ್ಕಾಗಿ ಸಾಕಷ್ಟು ಕಾರ್ಯ ಕ್ರಮಗಳನ್ನು ಸರಕಾರ ಮಾಡಲಕ್ಕೆ ಗಮನ ಕೊಡಬೇಕೆಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri H. C. LINGA REDDY (Kolar).—Mr. Speaker, Sir, I rise to support the Demands under discussion and to make a few observations.

With regard to Famine, I am afraid the famine relief works are not executed speedily. The estimates have to be prepared and they have to pass through several stages and through several officers of the Revenue Department. It was considered that it was only the sub-Divisional Office that was a post office, but now there is another post office and that is at the Divisional Commissioner's level. I do not know what purpose the Divisional Commissioners serve in the set up of the administration. These famine relief estimates have to be scrutinised by the Circle Officers and they have to pass through the Deputy Commissioners and again they have to pass through the Divisional Commissioners and reach the Government. Therefore, there is a good deal of red tapism and a good deal of dealy. If this delay is to be cut down in the execution of famine relief works, the Divisional Commissioners have to go first not merely from the point of view of execution of relief works but also from the point of view of execution of works in the Revenue Department. I think the Divisional Commissioners' Offices are more of a dead weight than of any utility to the country. Time and again, we have been emphasising that these Divisional Commissioners' Offices have to be abolished and there was a resolution on the floor of this House on this question and the Government have also been saying that they are examining the position but the Government have not taken any decision in the matter so far. I hope that at least our Revenue Minister will be kind enough to give a categorical answer and say that the Divisional Commissioners' Offices will be abolished very early.

Sri M. P. PATIL.—Has the Hon'ble Member taken into consideration the inconveniences in other areas ?

Sri H. C. LINGA REDDY.—I do not think these officers are serving any better purpose in the other areas also. Probably, the scheme is copied from the Bombay Government. What the experience of the M.L.A.s from those areas is I do not know. It is for them to give it. I have not so far heard any member from Bombay Area saying.....

Sri M. P. PATIL.—Sir, Koujalgi said just now.

Sri H. C. LINGA REDDY.—I did not hear him. The consensus of opinion is in favour of the abolition of the Divisional Commissioners' Offices so far as I have studied the situation, and the amount provided for relief works is not at all sufficient. First of all, we have to pass some resolutions and proposals have to be made and they have to pass through all these officers and the Government will spend a lakh or two. It has been our experience that especially the last instalment that is sent to the several districts is not made use of at all. Firstly, there was scarcity of rain and secondly by the time the estimates get sanctioned and the amount is actually available at the taluk level, the works could not be taken up at all. Therefore, I request the Government to continue the relief committees, to make more funds available to them and give more powers to them so that they may proceed with the work. Funds should be made available to the district relief committees in sufficient amounts till the crops are harvested for about 6 to 8 months. Again, there is a good deal of dealy in the matter of disposal of papers in the Revenue Department, beginning from the taluk level upto the Government. The Revenue Department is said to be the mother Department of all the Departments in the Government and if the mother Department itself were to be so slow and tardy, I do not know the fate of the other Departments in the State. I know that in my own taluk namely, Malur, large funds have been allowed to lapse for lack of enthusiasm and initiative on the part of the Tahsildar and Revenue Inspectors, and especially because an N.E.S. Scheme has been introduced, the Tahsildar and the Revenue Inspectors think that they have absolutely no work and that their work is merely to collect some revenue Of course, T.Ts. are levied and *kandayams* are collected. Except the collection of *kandayams* and collections

(SRI H. C. LINGA REDDY)

of T.Ts. even at the point of attachment of some movables like bullocks which are used by the ryots for ploughing the land, the Revenue Officers are not at all doing any other work. Dharkast petitions are not disposed of and several other petitions for taccavi loans, for well subsidy, for land improvement loans are not disposed of at all. These things are not inspected at any time with the result that at the end of the revenue year several funds had to lapse. Of course, funds themselves were received very late and to add to the delay in receipt of those funds, there was the lethargy and laziness of the officials and officers themselves with the result that funds had to lapse. Therefore, I request the Revenue Minister to quicken the pace of the disposals of papers and pay more attention to the several matters I have referred to.

With regard to inam abolition, I am afraid here again there is a good deal of delay. Nearly 5 or 6 years ago, we passed the Religious and Charitable Inams Abolition Act and the Personal and Miscellaneous Abolition Act. If there should be so much delay in the implementation of the several provisions of these two Acts, apart from the delay in the implementation of the land reforms which we have on our Statute Book and which have been promised by the Government, the very purpose with which these Acts were enacted is frustrated. The peasantry is not reaping any benefit at all. The Inamdars are selling away their lands. Several villages in Kolar District under the inam tenure have not been surveyed at all. Probably, in Bangalore and in some ether districts survey and settlement operations have been started. In Kolar District, out of as many as 600 inam villages only about 30 villages have been taken over by the Government and the Government has been often saying that it will take about 10 years more to implement the Inam Abolition Act. If there should be so much dealy in this respect, my fear is that the inamdars will sell away their lands under the plea that the land is theirs and the tenants will be evicted. They will demoralise the tenants themselves and sell away the land belonging to the tenants to the tenants themselves.

There is a good deal of demoralisation in these inam villages. Therefore, unless the Government gives them sufficient protection and implement the several provisions very early.....

SRI M. P. PATIL.—Under the Protection of Tenants Act, the inamdars have no right to sell the lands.

SRI H. C. LINGA REDDY.—We know how far the tenants have been making use of the provisions of the Tenancy Act. That is why the Inam Abolition Act has been promulgated. The provisions are not yet implemented. They should be implemented quickly. The result is that the peasantry is not reaping the benefit which we thought they would reap. Therefore, Sir, it is very urgent and necessary that these provisions of the inam abolition Act should be implemented very early.

With regard to the posting of the officers Sir, there is many a case where the superior officers are superseded and there are several instances where you have been posting officers without much experience to responsible places at the district headquarters and taluk headquarters. In the result, they do not have much experience and for want of experience, they are not in a position to discharge their duties properly and efficiently. The result is that the country suffers. Therefore, I request the Government to see that senior people with proper experience are posted to the charge of the taluks and districts; and also to see that there are no supersessions of senior officers by junior officers.

With these observations, I support the Demand Sir.

ಶ್ರೀ ಟಿ. ತಾರೇಗೌಡ (ಶಿರಾ).—ಸ್ವಾಮಿ, ರೆವೆನ್ಯೂ ಖಾತೆಗಳ ಡಿಮ್ಯಾಂಡನ್ನು ಅನುಮೋದಿಸುತ್ತ ಸರ್ಕಾರಕ್ಕೆಕೆಲವು ಸೂಚನೆಗಳನ್ನು ಕೊಡಲು ಬಯಸುತ್ತೇನೆ. ರೆವೆನ್ಯೂ ಬಾಬಿನ ಆಡಳಿತದಲ್ಲಿ ಮುಖ್ಯವಾಗಿ ತಾಲ್ಲೂಕು ಲೆವೆಲ್‌ನಲ್ಲಿರತಕ್ಕ ಅಮಲ್ದಾರರುಗಳ ಆಡಳಿತ ಸಮರ್ಪಕವಾಗಿ ಇಲ್ಲದೆ ಹೋದರೆ ತಾಲ್ಲೂಕಿನಲ್ಲಿ ಜನರ ಮತ್ತು ರೈತರ ಏಳಿಗೆಗೆ ತೊಂದರೆಯುಂಟಾಗುತ್ತದೆ. ನನ್ನ ಕ್ಷೇತ್ರವಾದ ಶಿರಾ ತಾಲ್ಲೂಕಿನ ವಿಚಾರ ಹೇಳಬೇಕೆಂದರೆ ಅಲ್ಲಿನ ಅಮಲ್ದಾರರು ಶಿರಾ ತಾಲ್ಲೂಕಿನ ಹಳ್ಳಿಗಳಲ್ಲಿ ಪಾರ್ಟಿಗಳನ್ನು ಕಟ್ಟು

ದ್ದಾರೆ. ಅದರಮೇಲೆ ಅನೇಕ ದೂರುಗಳು ಬರಿದಿದ್ದಾಗ್ಗೂ, ಸರ್ಕಾರಕ್ಕೆ ಅನೇಕ ಅರ್ಜಿಗಳು ಬಂದಿದ್ದಾಗ್ಗೂ ಇದುವರೆಗೂ ಪಕ್ಷಪಾತದಿಂದ ಅಧಿಕಾರಿಗಳನ್ನು ಅಲ್ಲಿಂದ ಬದಲಾಯಿಸಲು ಸರ್ಕಾರ ಮನಸ್ಸು ಮಾಡಿಲ್ಲ. ಮಾನ್ಯ ರೆವೆನ್ಯೂ ಸಚಿವರೂ ಮತ್ತು ತುಮಕೂರು ಜಿಲ್ಲೆಯ ಪ್ರತಿನಿಧಿಯಾಗಿ ಮಂತ್ರಿ ಮಂಡಲದಲ್ಲಿರತಕ್ಕ ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರೂ, ದೂರುಗಳು ಅವರಿಗೆ ಚೆನ್ನಾಗಿ ಗೊತ್ತಿದ್ದರೂ ಸಹ, ಯಾರ ವಶೀಲಿ ಬಾಜಿಯಿಂದಲೋ ಅದಕ್ಕೆ ಗಮನ ಕೊಡದೆ ಇರುವುದರಿಂದ ತಾಲ್ಲೂಕಿನ ಗ್ರಾಮಾಂತರಗಳಲ್ಲಿರುವ ರೈತರಿಗೆ ಬಹಳ ತೊಂದರೆಯುಂಟಾಗುವ ಸ್ಥಿತಿಯಲ್ಲಿದೆ. ಮಾನ್ಯ ಸಚಿವರು ಕೊಡಲೇ ನೂಕ್ತಕ್ರಮಗಳನ್ನು ತೆಗೆದುಕೊಂಡು ಅಮಲ್ದಾರರನ್ನು ಆ ಸ್ಥಳದಿಂದ ಬದಲಾಯಿಸತಕ್ಕದ್ದು ಅತ್ಯಾವಶ್ಯಕವಾಗಿರುತ್ತದೆ. ಇವರಮೇಲೆ ದೂರುಗಳು ಬಂದು ಲಂಚಸಿರೋಧ ಶಾಖೆಯವರೂ ಕೂಡ ವಿಚಾರಣೆ ನಡೆಸಿರುತ್ತಾರೆ. ಅವರಮೇಲೆ ಚಾರ್ಜ್ ಬಂದಿದೆಯೇ ಎನ್ನುವುದು ಮಾನ್ಯ ಸಚಿವರಿಗೂ ಮತ್ತು ಡಿವಿಷನಲ್ ಕಮಿಷನರಿಗೂ ಗೊತ್ತಿರಬಹುದು. ಅವರು ಈಗಿನ ಸನ್ನಿವೇಶಗಳಿಗೆ ಹೊಂದಿಕೊಂಡು ಹೋಗತಕ್ಕವರಲ್ಲ. ಬ್ಯೂರೋಕ್ರಾಟಿಕ್ ಟೆಂಪರ್‌ಮೆಂಟ್ ಇರುವ ಅಧಿಕಾರಿಗಳು; ಜನರಲ್ಲಿ ವಿಶ್ವಾಸ ಬೆಳೆಸಿಕೊಂಡು, ಅವರಿಗೆ ಕೊಟ್ಟಿರತಕ್ಕ ಅಧಿಕಾರಗಳನ್ನು ಸರ್ವ ಸಮರ್ಪಕವಾಗಿ, ನಿಷ್ಪಕ್ಷಪಾತವಾಗಿ, ನಿರ್ವಹಿಸತಕ್ಕ ಮನೋಭಾವದಿಂದ ಕೂಡಿಲ್ಲ. ಇಂಥ ಅಧಿಕಾರಿಗಳು ಮುಖ್ಯವಾಗಿ ರೆವೆನ್ಯೂ ಇಲಾಖೆಯಲ್ಲಿದ್ದರೆ ಆ ತಾಲ್ಲೂಕಿಗೆ ಮತ್ತು ಜನಗಳಿಗೆ ಬಹಳ ಕೆಟ್ಟದ್ದಾಗುತ್ತದೆ. ಆದುದರಿಂದ ಇವರನ್ನು ದಯವಿಟ್ಟು ಆ ಸ್ಥಳದಿಂದ ವರ್ಗಮಾಡಬೇಕೆಂದು, ವಿಧಿಯಿಲ್ಲದೆ, ವ್ಯಸನದಿಂದ ಈ ಡಿವಿಸನ ಸಭೆಯ ಮುಂದೆ ತಿಳಿಸಬೇಕಾಗಿದೆ.

ತುಮಕೂರು ಜಿಲ್ಲೆಯಲ್ಲಿ ಕ್ಷಾಮ ನಿವಾರಣೆ ಗೋಸ್ಕರ ಬಹಳ ಹಣವನ್ನು ಮಂಜೂರುಮಾಡಿ, ಎಸ್ಟಿಮೇಟುಗಳನ್ನು ಮಂಜೂರುಮಾಡಿದ್ದರೂ ಕೂಡ, ಏನೋ ಕಾರಣಾಂತರದಿಂದ ಆ ಕೆಲಸಗಳನ್ನು ನಿಲ್ಲಿಸಿದ್ದಾರೆ. ಅಲ್ಲ ಅನೇಕ ಹೋಬಳಿಗಳಲ್ಲಿ ಉದಾಹರಣೆಗೆ ಶಿರಾ ತಾಲ್ಲೂಕಿನ ಗೌಡಗೆರೆ ಮತ್ತು ಹುಲಕುಂಟೆ ಹೋಬಳಿಗಳು, ಪಾವಗಡ ತಾಲ್ಲೂಕಿನ ನಾಗಲಮಡಿಕೆ, ಹೊಸಕೋಟೆ ಮತ್ತು ಕನಬ ಹೋಬಳಿಗಳು—ಇವುಗಳಲ್ಲಿ ನಾಲ್ಕಾಣೆ ಬೆಳೆ ಆಗದೆ ಇದ್ದರೂ ಸಹ ಅಲ್ಲಿಯ ಅಮಲ್ದಾರರು ಕ್ಷಾಮ ನಿವಾರಣೆ ಕಾರ್ಯಗಳನ್ನು ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡುತ್ತಾ ಇಲ್ಲ. ಇದಕ್ಕೆ ಅವರಲ್ಲಿರುವ ಉದಾಸೀನತೆಯೇ ಕಾರಣವಾಗಿದೆ. ಅಲ್ಲದೆ ಆ ಭಾಗಗಳಲ್ಲಿ ನಾಲ್ಕಾಣೆ ಫಸಲು ಆಗಿಲ್ಲದೆ ಇದ್ದರೂ, ಅವರಿಗೆಲ್ಲ ಕಂದಾಯ ರಿಮಿಷನ್ ಆಗತಕ್ಕ ವಿಚಾರದಲ್ಲಿ ಸರ್ಕಾರಕ್ಕೆ ಶಿಫಾರ್ಸು ಮಾಡಿಲ್ಲವೆಂದು ತಿಳಿದುಬಂದಿದೆ. ಈಗಲಾದರೂ ಕೂಡ ಮಾನ್ಯ ಸಚಿವರು ಶಿರಾ, ಪಾವಗಡ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿದರೆ ಪರಿಸ್ಥಿತಿ ಗೊತ್ತಾಗದೆ ಇರದು. ನಾನಾಗಲೇ ತಿಳಿಸಿದ ಭಾಗಗಳಲ್ಲಿ ಕಂದಾಯದ ರಿಮಿಷನ್ ಅತ್ಯಾವಶ್ಯಕವಾಗಿದೆ ಮತ್ತು ಕ್ಷಾಮ ನಿವಾರಣಾ ಕಾರ್ಯಗಳು ಅತಿ ಜರೂರಾಗಿ ಆಗಬೇಕೆಂದು ಹೇಳುತ್ತೇನೆ. ಮೈನರ್ ಇರಿಗೇಷನ್ ಕೆಲಸಗಳನ್ನು ಕೂಡ ಇದುವರೆಗೂ ತೆಗೆದುಕೊಂಡಿಲ್ಲ, ಮುಖ್ಯವಾಗಿ ನಾಲ್ಕಾಣೆಗಿಂತಲೂ ಕಡಮೆ ಫಸಲು ಆಗಿರತಕ್ಕ ಪ್ರದೇಶಗಳಲ್ಲಿ, ಕ್ಷಾಮ ನಿವಾರಣೆಗೆ ಮಂಜೂರಾಗಿರತಕ್ಕ ಹಣವನ್ನು ಕೂಡಲೇ ಖರ್ಚು ಮಾಡುವಂತೆ ಮಾನ್ಯ ಸಚಿವರು ಜಿಲ್ಲಾಧಿಕಾರಿಗಳಿಗೆ ತಿಳಿಸಿ, ತನ್ಮೂಲಕ ಅಮಲ್ದಾರರುಗಳು ಸಚಿವರ ಆಜ್ಞೆಯಂತೆ ನೆರವೇರಿಸುವುದಕ್ಕೆ ನೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಭೆಯಲ್ಲಿ ತಿಳಿಸಲು ಇಚ್ಛೆಪಡುತ್ತೇನೆ.

ಇನ್ನು ಅಮಲ್ದಾರರ ಪಟ್ಟಿಯನ್ನು ಮಾಡುವುದರಲ್ಲಿ ಹಿಂದಿನ ಬೊಂಬಾಯಿ ಸರ್ಕಾರದಲ್ಲಿದ್ದ ಹಾಗೆ ಎಸ್.ಎಸ್.ಎಲ್.ಸಿ. ಯ ಅರ್ಹತೆ ಇರುವವರನ್ನೆಲ್ಲ ಅಮಲ್ದಾರರ ಪಟ್ಟಿಗೆ ಸೇರಿಸಬಹುದು ಎಂದು ಒಂದು ಕ್ರಮವನ್ನಿಟ್ಟುಕೊಂಡಿರುವಹಾಗೆ ಕಾಣುತ್ತದೆ. ಆದರೆ ಅನೇಕರು double graduates ಮತ್ತು graduates ಆಗಿದ್ದು 10-15-20 ವರ್ಷ ಸರ್ವಿಸ್‌ಮಾಡಿದ್ದು, maximum of the grade ಪಡೆದು stagnate ಆಗಿರುವವರಿದ್ದಾರೆ. ಇಂಥವರನ್ನೆಲ್ಲ ಲಿಸ್ಟಿಗೆ ಸೇರಿಸಿಕೊಳ್ಳದೆ S.S.L.C. ಆಗಿರುವವರನ್ನು ಸೇರಿಸಲು ಅವಕಾಶ ಕೊಟ್ಟರೆ, ಈ ಸರ್ಕಾರದ ಆಡಳಿತವನ್ನು ದಕ್ಷತೆಯಿಂದ ನಡೆಸುವುದಕ್ಕೆ ಅಧಿಕಾರಿಗಳಿಗೆ ಎಷ್ಟು ಮಟ್ಟಿಗೆ ಸಂತೋಷವುಂಟಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ಯೋಚಿಸಬೇಕು.

ಶ್ರೀ ಎಂ. ಪಿ. ಪಾಟೀಲ್.—S.S.L.C ಮಿನಿಮಮ್ ಕ್ವಾಲಿಫಿಕೇಷನ್ ಎಂದು ಗೊತ್ತುಮಾಡಿದ್ದೇವೆ. It does not mean that graduates are debarred.

ಶ್ರೀ ಟಿ. ತಾರೇಗೌಡ.—ಮಿನಿಮಮ್ ಕ್ವಾಲಿಫಿಕೇಷನ್ S.S.L.C. ಆದಾಗ್ಗೂ ಅದರ ಉದ್ದೇಶ S.S.L.C. ಆಗಿರುವವರಿಗೆ preference ಕೊಡುತ್ತಾರೆನ್ನುವ ಭಾವನೆ ಬೆಳೆದು ಬಂದಿದೆ. ಆ ರೀತಿ ಏನಾದರೂ ಮಾಡಿದರೆ ದಕ್ಷತೆಗೆ ಬಹಳ ತೊಂದರೆಯುಂಟಾಗುತ್ತದೆ; ಸರ್ಕಾರದ ಆಡಳಿತ ನಿಷ್ಪಕ್ಷಪಾತವಾಗಿ, ದಕ್ಷತೆಯುಂದ, ತೃಪ್ತಿಕರವಾಗಿ ನಡೆಯಲು ತೊಂದರೆಯಾಗುತ್ತದೆ. ಆದುದರಿಂದ ಮಾನ್ಯ ಸಚಿವರು ನಾನು ಹೇಳಿರುವ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಸರ್ವಿಸ್‌ನಲ್ಲಿದ್ದು stagnate ಆಗಿರುವ graduates ಗೆ ಅವಕಾಶವನ್ನು ಕೊಡಬೇಕು. ಅದರಲ್ಲಿ Unrepresented Communities ಎಷ್ಟೋ ಇರುತ್ತವೆ. ಅಂಥವರಿಗೆ ಸಹ ಗಮನ ಕೊಡಬೇಕು, ಅವರ ಹಕ್ಕುಗಳಿಗೆ ಧಕ್ಕೆ ಭಾರದಂತೆ ನೋಡಿಕೊಳ್ಳಬೇಕೆಂದು ನೂಚಿಸಲು ಇಷ್ಟಪಡುತ್ತೇನೆ.

ರೆವೆನ್ಯೂ ಆಡಳಿತದಲ್ಲಿ ಈಗಿರತಕ್ಕ ಎಲ್ಲ ಡಿವಿಸನಲ್ ಕಮಿಷನರುಗಳೂ ಟೂರ್ ಮಾಡಿದರೆ, ಮತ್ತು ಆ ಡಿವಿಷನಲ್ಲಿರುವ ಅಧಿಕಾರಿಗಳು ಟೂರ್ ಮಾಡಿದರೆ, ಆಯಾ ಕ್ಷೇತ್ರದ ಸದಸ್ಯರಿಗೆ ಟೂರ್ ಪ್ರೋಗ್ರಾಂ ಕಳುಹಿಸತಕ್ಕ ಪದ್ಧತಿ ಇದೆ. ಏನು ಕಾರಣವೋ, ಶಿರಾ ತಾಲ್ಲೂಕಿನ ಅಮಲ್ದಾರರು ಎಲ್ಲಿ ಪ್ರವಾಸ ಹೋಗುತ್ತಾರೆಂಬುದೇ ಗೊತ್ತಾಗುವುದಿಲ್ಲ. ಅವರು ಟೂರ್ ಪ್ರೋಗ್ರಾಂ ಕಳುಹಿಸುವುದಕ್ಕೆ ಮನಸ್ಸು ಮಾಡುವುದಿಲ್ಲ. ಜನರ ಪ್ರತಿನಿಧಿಗಳಾದ ಶಾಸನಸಭಾ ಸದಸ್ಯರನ್ನು ಸರಿಯಾಗಿ ಕಾಣುವುದಿಲ್ಲ. ಮಾನ್ಯ ಸಚಿವರಿಗೆ ಶಿರಾ ತಾಲ್ಲೂಕಿನ ಅಮಲ್ದಾರರ ವಿಷಯದಲ್ಲಿ ಏನಾದರೂ ದೂರು, ಬಂವಿದೆಯೇ? ಹಾಗೆ ಬಂದಿದ್ದರೆ ಅದರ ಬಗ್ಗೆ ವಿಚಾರಣೆ ನಡೆಸಿ ದೂರುಗಳ ಸತ್ಯಾಸತ್ಯತೆಯ ವಿಷಯವನ್ನು ಹೇಳಬಹುದಾಗಿತ್ತು. ಆ ಅಮಲ್ದಾರರಿಂದ ಅಲ್ಲಿಯ ಜನರಿಗೆ ಉಪಕಾರವಾಗುತ್ತಿದೆಯೇ, ತೊಂದರೆಯಾಗುತ್ತಾ ಇದೆಯೇ ಅಥವ ಅವರದು ಏನೂ ತಪ್ಪಿಲ್ಲವೆ ಎಂಬುದನ್ನು ಹೇಳಬಹುದಾಗಿತ್ತು. ಆ ರೀತಿ ಯಾಗಿ ಏನನ್ನೂ ಮಾನ್ಯ ಸಚಿವರು ಮಾಡುತ್ತಿಲ್ಲ, ನೂಕ್ತವಾದ ನ್ಯಾಯವಾದ ಗಮನ ಕೊಡುತ್ತಿಲ್ಲ. ಅದು ಬಹಳ ವಿಷಾದಕರವಾದದ್ದು. ಆ ರೀತಿ

(ಶ್ರೀ ಟಿ. ತಾರೇಗೌಡ)

ಔದಾಸೀನ್ಯದಿಂದ ಕಂದರೆ ಜನರ ಅಸಮಾಧಾನದ ಪ್ರತಿಬಿಂಬ ಸರ್ಕಾರದಮೇಲೆ ಪರಿಣಮಿಸುತ್ತದೆ. ಆದುದರಿಂದ ದಯವಿಟ್ಟು ಜನರಿಗೋಸ್ಕರ, ಜನರ ಹಿತದೃಷ್ಟಿಯಿಂದ, ಸರ್ಕಾರದವರು ನ್ಯಾಯರೀತಿಯಿಂದ ವರ್ತಿಸಬೇಕು ಎಂದು ಈ ಬೇಡಿಕೆಯನ್ನು ಅನುಮೋದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

4 P.M.

*ಶ್ರೀ ಬಿ. ಚಾಮಯ್ಯ (ಪಾರಿಡವಪುರ).—ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ರೆವಿನ್ಯೂ ಬೇಡಿಕೆಗಳ ಮೇಲೆ ನಾನು ಕೆಲವು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಈ ಲ್ಯಾಂಡ್ ರೆವಿನ್ಯೂ ನಮ್ಮ ದೇಶದಲ್ಲಿ ಸುಮಾರು 458 ಲಕ್ಷ ರೂಪಾಯಿಗಳಷ್ಟು ವಸೂಲಾಗುತ್ತದೆ. ಇದಕ್ಕೆ ಒಂದು ಕೋಟಿ ಐವತ್ತೆರಡು ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಇಷ್ಟು ಖರ್ಚು ಬಹಳ ಹೆಚ್ಚು. ಲ್ಯಾಂಡ್ ರೆವೆನ್ಯೂಗೋಸ್ಕರ ನಮ್ಮ ಸರ್ಕಾರದವರು ಖರ್ಚುಮಾಡುತ್ತಾ ಇರುವುದು ಹೆಚ್ಚು. ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಬೇಕೆಂದಿದ್ದೇನೆ. ಲ್ಯಾಂಡ್ ರೆವಿನ್ಯೂ ವಜಾಮಾಡಿ ಆ ಸ್ಥಳದಲ್ಲಿ ಇಕಂಟ್ಯಾಕ್ಸ್ ಲೆವಿ ಮಾಡಬೇಕು. ಇಕಂಟ್ಯಾಕ್ಸ್ ಲೆವಿ ಮಾಡುವುದರಿಂದ ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುತ್ತದೆ. ಅವರಿಗೆ ಲ್ಯಾಂಡ್ ರೆವಿನ್ಯೂ ಕೊಡುವ ಕಷ್ಟ ತಪ್ಪುತ್ತದೆ. ಅವರಿಗೆ ಒಂದು ರಿಲೀಫ್ ಕೊಟ್ಟಹಾಗಾಗುತ್ತದೆ. ಅದನ್ನು ಸರ್ಕಾರದವರು ಜಾರಿಗೆ ತರಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ಯಾನುಭೋಗರ ವಿಷಯವನ್ನು ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಹಳ್ಳಿಯಲ್ಲಿ ಪಾರ್ಟಿ ವೈಷಮ್ಯ ವ್ಯಾಜ್ಯಗಳಾಗಲು ಶ್ಯಾನುಭೋಗರುಗಳೇ ಕಾರಣರಾಗಿರುವುದರಿಂದ ಶ್ಯಾನುಭೋಗರ ಆಫೀಸು ವಜಾಮಾಡಬೇಕು. ಆದೂ ಅಲ್ಲದೆ ಹಳೆಯ ಮೈಸೂರಿಗೆ ಬಂದಿರುವ ಇಂಟಿಗ್ರೇಟೆಡ್ ಏರಿಯಾದಲ್ಲಿ ಸಂಬಳ ಕೊಟ್ಟು ಕೆಲಸ ಮಾಡಿಸುತ್ತಿದ್ದಾರೆ. ಎಲ್ಲಾ ವಿಭಾಗದಲ್ಲೂ ಯೂನಿಫಾರ್ಮಿಟಿ ಸ್ಥಾಪನೆ ಮಾಡಬೇಕು ಎಂದು ಹೇಳುವ ಕಾಲದಲ್ಲಿ ಹಳೆಯ ಮೈಸೂರಿನಲ್ಲಿಯೂ ಶ್ಯಾನುಭೋಗರನ್ನು ವಜಾಮಾಡಿ ಅವರಿಗೆ ಸಂಬಳ ಕೊಡುವಂತೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ತೋಟಿ ತಳವಾರರುಗಳ ವಿಷಯ ಅನೇಕ ಸಲ ಈ ಸಭೆಯಲ್ಲಿ ಚರ್ಚೆಯಾಗುತ್ತಿದೆ. ರೈತರು ಕೊಡಬೇಕಾದ ಮಿರಾಸೆಯನ್ನು ಅವರಿಂದ ವಸೂಲುಮಾಡಿಕೊಡಬೇಕು ಎಂದು ಹೇಳುತ್ತೇನೆ. ರೈತರು ನುಗ್ಗಿಯಲ್ಲಿ ಯಾರೂ ಮಿರಾಸೆಯನ್ನು ಕೊಡುತ್ತಾ ಇಲ್ಲ. ತೋಟಿ ತಳವಾರರುಗಳು ಊರಿನಲ್ಲಿ ರಾತ್ರಿಕಾಲದಲ್ಲಿ ಕಾವಲು ಕಾಯುವುದು, ಅವರ ಜಮೀನುಗಳಿಗೆ ನೀರು ಸಪ್ಲೈ ಮಾಡುವುದು ಇವೆಲ್ಲಾ ಅವರ ಕೆಲಸಗಳು. ಅಮಲ್ದಾರರು ಬಂದರೆ ಅವರಿಗೆ ಏನೇನು ಸೌಕರ್ಯ ಬೇಕೋ, ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕೋ ಅವೆಲ್ಲಾ ಮಾಡುವುದು ತೋಟಿ ತಳವಾರರುಗಳು. ಆದರೂ ಅವರಿಗೆ ಸರಿಯಾದ ಅನುಕೂಲವಿಲ್ಲ. ಆದ್ದರಿಂದ ಸರ್ಕಾರದವರು ಈಗಿನಷ್ಟು ಸಂಖ್ಯೆ ಇಲ್ಲದಿದ್ದರೂ ಸ್ವಲ್ಪ ಅವರ ಸಂಖ್ಯೆಯನ್ನು ಕಡಮೆ ಮಾಡಿ, ಸಂಬಳವನ್ನು ಗೊತ್ತುಮಾಡಬೇಕೆಂದು ಹೇಳಿ ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಸರ್ಕಾರದ ವಶದಲ್ಲಿ ಲಕ್ಷಾಂತರ ಎಕರೆ ಜಮೀನು ಇದೆ. ಆ ಜಮೀನೆಲ್ಲವೂ ಪಾಳು ಇದ್ದೆ ಎಂದು ಕೂಗುತ್ತಾರೆ. ಈಗ ಪರದೇಶದಿಂದ ಆಹಾರವನ್ನು ತರಿಸಬೇಕಾಗಿದೆ. ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಪರದೇಶಕ್ಕೆ ತೆರಬೇಕಾಗಿದೆ. ಇಷ್ಟೆಲ್ಲಾ ಕಷ್ಟಪಡುತ್ತಿರುವಾಗ, ಲಕ್ಷಾಂತರ ಎಕರೆ ಸರ್ಕಾರದ ವಶದಲ್ಲಿದ್ದರೂ ಕೂಡ ಸಾಗು ಮಾಡುವುದಕ್ಕೆ ಜಮೀನು ಇಲ್ಲದೆ ಇರುವವರಿಗೆ ಕೊಡದೆ ಇಟ್ಟುಕೊಂಡಿರುವುದು ಬಹಳ ತಪ್ಪು. ಕೂಡಲೇ ಲ್ಯಾಂಡ್‌ಲೆಸ್ ಜನರಿಗೆ ಈ ಜಮೀನನ್ನೆಲ್ಲಾ ಹಂಚಿಕೆಮಾಡಿ, ಎಲ್ಲಾ ಜಮೀನುಗಳನ್ನು ಸಾಗು ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಸಾಗಿಗೆ ಲಾಯಕ್ಕಾಗಿಲ್ಲದಿದ್ದರೆ ಜಮೀನನ್ನು ಸಾಗಿಗೆ ಲಾಯಕ್ಕು ಮಾಡಿ ಬಡಬಗ್ಗರಿಗೆ ಕೊಟ್ಟು ಆ ಜಮೀನು ಸಾಗಾಗುವಂತೆ ಮಾಡಬೇಕು. ದೇಶದಲ್ಲಿ ಆಹಾರೋತ್ಪತ್ತಿ ಹೆಚ್ಚಿಗೆ ಆಗುವಂತೆ ಅವಕಾಶ ಮಾಡಬೇಕು. ಹೆಚ್ಚಿಗೆ ಆಹಾರೋತ್ಪತ್ತಿ ಆಗಬೇಕಾದರೆ ಮೈನರ್ ಇರಿಗೇಷನ್ ಕಡೆಗೆ ಹೆಚ್ಚು ಗಮನಕೊಡಬೇಕು. ಸರ್ಕಾರದವರು ದೊಡ್ಡ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದಾರೆ. ಅದು ಪೂರ್ಣವಾಗಬೇಕಾದರೆ ವರ್ಷಗಟ್ಟಲೆ ಹಿಡಿಯುತ್ತದೆ; ಮತ್ತು ಕೋಟ್ಯಾಂತರ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ಸಣ್ಣ ಸಣ್ಣ ಕಾಮಗಾರಿಗಳ ಬಗ್ಗೆ ಜಾಗ್ರತೆ ಸರ್ಕಾರದವರು ಹೆಚ್ಚಿಗೆ ಗಮನ ಕೊಟ್ಟು, ಹೆಚ್ಚಿಗೆ ದುಡ್ಡು ಒದಗಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ. ಅಮೃತಮಹಲ್‌ನಲ್ಲಿ 80 ಸಾವಿರ ಎಕರೆ ರಿಲೀಜ್ ಮಾಡಿದ್ದಾರೆ. ಮಾರ್ಚ್ 15ನೆಯ ತಾರೀಖಿನೊಳಗೆ ರೈತರು ಅರ್ಜಿಕೊಡಬೇಕು ಎಂದು ಅಡ್ವರ್ಟೈಸ್‌ಮೆಂಟಿನಲ್ಲಿ ಹಾಕಿಕೊಂಡಿದ್ದಾರೆ. ಈ ಜೈವನ್ನು ಎಕ್ಸ್‌ಟೆಂಡ್‌ಮಾಡಿ ರೈತರಿಂದ ಅರ್ಜಿ ಬರುವುದಕ್ಕೆ ಅವಕಾಶಮಾಡಬೇಕು. ಜಮೀನು ರಿಲೀಜ್‌ಮಾಡಿದ್ದೇವೆ, ವ್ಯವಸಾಯಕ್ಕೆ ಕೊಡುತ್ತೇವೆ, ಜಮೀನು ಇಲ್ಲದೆ ಇರುವವರು ಅರ್ಜಿ ಹಾಕಬೇಕೆಂದು ಟಾಂ ಟಾಂ ಮೂಲಕ ತಿಳಿಸಬೇಕು.

ಶ್ರೀ ಎಂ. ಪಿ. ಪಾಟೀಲ್.—15ನೆಯ ತಾರೀಖಿನ ನಂತರ ಕೊಡಬಾರದು ಎಂದು ಇಲ್ಲ. 15ನೆಯ ತಾರೀಖಿನೊಳಗೆ ಎಷ್ಟು ಅರ್ಜಿ ಬರುತ್ತವೋ ಅವನ್ನು ವಿಚಾರಮಾಡಿ ಲ್ಯಾಂಡ್ ಡಿಸ್ಟ್ರಿಬ್ಯೂಟ್‌ಮಾಡಬೇಕು ಎಂದು ಇದೆ. ಅದರನಂತರ ಕೊಡಬಾರದು ಎಂದು ಇಲ್ಲ.

ಶ್ರೀ ಬಿ. ಚಾಮಯ್ಯ.—ತಾಲ್ಲೂಕಿನಲ್ಲಿ ಸರ್ವೇಯರ್ಸ್ ಎಲ್ಲಿದ್ದಾರೋ ಗೊತ್ತಿಲ್ಲ.

ಶ್ರೀ ಎಂ. ಪಿ. ಪಾಟೀಲ್.—ಅವರು ಸರ್ವೇಮಾಡುತ್ತಾರೆ. ನೀವು ನೋಡಿ ಏನು ಮಾಡಬೇಕಾಗಿದೆ?

ಶ್ರೀ ಬಿ. ಚಾಮಯ್ಯ.—ತಾಲ್ಲೂಕು ಆಫೀಸಿನಲ್ಲಿ ಇದ್ದರೆ ಬಂದ ಜನಗಳು ನೋಡುವುದಕ್ಕೆ ಅವಕಾಶವಾಗುತ್ತದೆ ಮತ್ತು ಸರ್ವೇಮಾಡುವುದಕ್ಕೆ ಕರೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಜಮೀನು ಸರ್ವೇ ಮಾಡಬೇಕು ಎಂದು ತಾಲ್ಲೂಕು ಅಮಲ್ದಾರರು ಮೂರು ರೂಪಾಯಿ ಕಟ್ಟಿಸಿಕೊಳ್ಳುತ್ತಾರೆ. ಜಮೀನಿಗೆ ಬಂದು ಸರ್ವೆ ಮಾತ್ರ ಮಾಡುವುದಿಲ್ಲ. ಪಾರ್ಟಿ ಬಂದು ಸರ್ವೇಯರನ್ನು ನೋಡಿದರೆ ಸರ್ವೇಯರ್ ಬರುತ್ತಾರೆ, ಇಲ್ಲದಿದ್ದರೆ ವರ್ಷಾನುಗಟ್ಟಲೆ ಅದರೂ ರೂಪಾಯಿ ಕಟ್ಟಿದ್ದು ಇದ್ದೇ ಇರುತ್ತದೆ. ಅವರು ಬಂದು ಸರ್ವೆಮಾಡುವುದಿಲ್ಲ. ಇದನ್ನು ನಿರಪಡಿಸಬೇಕು. ಆದ್ದರಿಂದ ತಾಲ್ಲೂಕಿನಲ್ಲಿ ಸರ್ವೇಯರ್ಸ್ ಇರಬೇಕು ಎಂದು ತಮ್ಮ ಮೂಲಕ ಸಲಹೆ ಮಾಡುತ್ತೇನೆ.

ಶ್ರೀ ಎಂ. ಪಿ. ಪಾಟೀಲ್.—ಸರ್ವೇಯರ್ಸ್ ತಾಲ್ಲೂಕಿನಲ್ಲೇ ಇರುತ್ತಾರೆ.

ಶ್ರೀ ಬಿ. ಚಾಮಯ್ಯ—ಒಂದು ಕಡೆ ಇರಬೇಕು ಎಂದು ನಾನು ಹೇಳುವುದು. ಗ್ರಾಮಪಂಚಾಯಿತಿಗಳನ್ನು ಇಂಪ್ರೂವ್ ಮಾಡುವುದಕ್ಕೆ ಅಮಲ್ದಾರರ ಕೈಯ್ಯಲ್ಲಿ ಸ್ವಲ್ಪ ದುಡ್ಡು ಕೊಡುತ್ತಾರೆ. ದುಡ್ಡು ಕೊಟ್ಟರೆ ಏನುಮಾಡುತ್ತಾರೆ? ಪಂಚಾಯಿತಿಗೆ ಇಷ್ಟು ಗ್ರಾಂಟು ಕೊಟ್ಟಿದ್ದೇವೆ ಎಂದು ಹೇಳಿಬಿಟ್ಟು ತಾವೇ ಕಂಟ್ರಾಕ್ಟರುಗಳನ್ನು ಗೊತ್ತುಮಾಡಿ ಹಳ್ಳಿಗಳಿಗೆ ದುಡ್ಡು ಕೊಟ್ಟು ಕಳುಹಿಸುತ್ತಾರೆ. ಯಾವ ಕೆಲಸ ಇದ್ದರೂ ಅವರ ಮುಖಾಂತರವೇ ಮಾಡಿಸಬೇಕಾಗುತ್ತದೆ. ಅವರು ಯಾವ ಕಂಟ್ರಾಕ್ಟರನ್ನು ನೇಮಕಮಾಡಿರುತ್ತಾರೋ ಅವರ ಮುಖಾಂತರವೇ ನಡೆಯುವುದಕ್ಕೆ ಪ್ರಯತ್ನಮಾಡುತ್ತಾರೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಅನೇಕ ಕಡೆ ಈ ರೀತಿಯಾಗಿದೆ. ಇದನ್ನೆಲ್ಲಾ ತಪ್ಪಿಸಬೇಕು ಎಂದು ನಾನು ತಮ್ಮಲ್ಲಿ ಮನವಿಮಾಡುತ್ತೇನೆ. ಪಾಂಡವಪುರ ತಾಲ್ಲೂಕಿನಲ್ಲಿ ಒಂದು ಟ್ಯಾಂಕ್ ಫೀಡರ್ ಚಾನಲ್ ತೆಗೆದುಕೊಂಡು ಬಂದರು. ಏಳು-ಎಂಟು ವರ್ಷಗಳ ಹಿಂದೆ ನೀರು ಹೆಚ್ಚಾಗಿ ಬಂದು ಸಣಬಕೊಪ್ಪಲು, ತಿರುಮಲಾಪುರ ಗನ್ನಾಯ್ಕನಹಳ್ಳಿ ಈಗ್ರಾಮಗಳು ಮುಳುಗಿ ಹೋದವು. ಅಲ್ಲಿಯ ರೈತರು ಎಂಟು-ಹತ್ತು ವರ್ಷಗಳಿಂದ ಪ್ರಾರ್ಥನೆ ಮಾಡಿದರೂ ಅವರಿಗೆ ಜಮೀನು ಕೊಟ್ಟಿಲ್ಲ, ಕ್ರಾಪ್ ಕಾಂಪೆನ್ಸೇಷನ್ ಕೊಟ್ಟಿಲ್ಲ. ಆದ್ದರಿಂದ ಅವರು ಬಹಳ ತೊಂದರೆಯಲ್ಲಿದ್ದಾರೆ. ತಾವು ಬೇಗ ಇದನ್ನು ಗಮನಕ್ಕೆ ತೆಗೆದುಕೊಂಡು ತೀರ್ಮಾನಮಾಡಿ ಅವರಿಗೆ ಜಮೀನು ಕೊಡಬೇಕು. ಅವರು ಜಮೀನು ಇಲ್ಲದೆ ಬಹಳ ತೊಂದರೆಪಡುತ್ತಿದ್ದಾರೆ. ಅವರಿಗೆ ಕ್ರಾಪ್ ಕಂಪೆನ್ಸೇಷನ್ ಕೊಡಿಸಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಆಗಲೇ ಹೇಳಿದ್ದೇನೆ. ಡಿವಿಜನಲ್ ಕಮೀಷನರುಗಳು ಬರೀ ಸಂಚಾರ ಮಾಡಿಕೊಂಡು ಟಿ. ಎ. ಸಂಪಾದನೆ ಮಾಡುವುದರಲ್ಲಿದ್ದಾರೆ. ಇದರಿಂದ ಏನೂ ಕೆಲಸ ಆಗುವುದಿಲ್ಲ. ಕಡ್ಡಾಯವಾಗಿ ಈ ಆಫೀಸುಗಳನ್ನು ತೆಗೆಯಬೇಕು ಎಂದು ಹೇಳುತ್ತೇನೆ. N.E.S.ನ್ನೂ ಅಮಲ್ದಾರರುಗಳಿಗೆ ಸೇರಿಸಿ ಬಿಟ್ಟರೆ ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತದೆ. ಈಗ B.D.O. ಮತ್ತು ಅಮಲ್ದಾರರು ಇಬ್ಬರೂ ಇರುತ್ತಾರೆ. ಈಗಾಗಲೇ ಅನೇಕ ಪ್ರಹನೀಯರು ಅಮಲ್ದಾರರುಗಳಿಗೆ ಸಾಕಷ್ಟು ಕೆಲಸ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ B.D.O. ಕೆಲಸವನ್ನು ಅಮಲ್ದಾರರುಗಳಿಗೆ ವಹಿಸಿದರೆ ಚೆನ್ನಾಗಿ ಆಗುತ್ತದೆ, ಖರ್ಚೂ ಕಡಮೆಯಾಗುತ್ತದೆ ಎಂದು ಹೇಳುತ್ತೇನೆ.

ರೋಣಪ್ಪವನಿ ಅಣಕಟ್ಟು ಹಾಕಿ ಅಲ್ಲಿಂದ ಮಾದರ ಹಳ್ಳಿ ಕೆರೆಗೆ ನೇರವಾಗಿ ನಾಲಾ ತಂದರು. ಅಲ್ಲಿ ಸಾಗಿಗೆ ಬಂದ ಜಮೀನನ್ನು ಯಾರೋ ಬೇರೆಯವರಿಗೆ ಕೊಟ್ಟರು. ಯಾರೋ ಕಾಂಗ್ರೆಸ್ಸಿನಲ್ಲಿ ಸೇರಿ ನೊಂದವರು ಎಂದು ಹೇಳಿ ಕೊಟ್ಟರು. ಗ್ರಾಮದವರಿಗೆ ಕೊಡದೆ, 20-30 ಮೈಲಿ ದೂರದಲ್ಲಿರುವವರಿಗೆ ಕೊಟ್ಟರು. ಈ ರೀತಿ ಮಾಡುವುದು ಸರಿಯಲ್ಲ. ಎಲ್ಲರನ್ನೂ ಸಮದೃಷ್ಟಿಯಿಂದ ನೋಡಬೇಕೆಂದು ಹೇಳುತ್ತೇನೆ.

*ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಈ ಕಂದಾಯದ ಬೇಡಿಕೆಯನ್ನು ಒಪ್ಪಿಕೊಳ್ಳುತ್ತಾ ನಾನು ಎರಡು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ. ರೆವಿನ್ಯೂ ಬೋರ್ಡ್ ಆದಮೇಲೆ ರೆವಿನ್ಯೂ ಖಾತೆಯ ಕೆಲಸ, ರೆವಿನ್ಯೂ ಮಂತ್ರಿಗಳ ಕೆಲಸ ಬಹಳ ಕಡಮೆಯಾಗಿದೆಯೆಂದು ತಿಳಿದಿದ್ದೇನೆ. ಹೀಗಿರುವಾಗ ಸ್ವತಂತ್ರವಾಗಿ ರೆವಿನ್ಯೂ ಪೋರ್ಟ್ ಫೋಲಿಯೋ ಎಂಬುದು ಇರಬೇಕೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಖಾತೆಗೆ ಸೇರಿದ ಮುಕ್ಕಾಲುಪಾಲು ಕೆಲಸವೆಲ್ಲಾ ಈಗ ರೆವಿನ್ಯೂ ಬೋರ್ಡಿಗೆ ಹೋಗಿದೆ. ಅಲ್ಲಿ ಉಳಿದಿರತಕ್ಕ ಕೆಲಸವೆಲ್ಲಾ ಅಧಿಕಾರವರ್ಗದವರನ್ನು ಇಟ್ಟುಕೊಂಡಿಲ್ಲಗೆ ವರ್ಗಮಾಡುವುದು ಅಷ್ಟೆ.

ಶ್ರೀ ಎಂ. ಪಿ. ಪಾಟೀಲ್.—ರೆವಿನ್ಯೂ ಬೋರ್ಡು ಕೇಸುಗಳನ್ನು ಮಾತ್ರ ನಡೆಸುತ್ತದೆ. ಮದ್ರಾಸ್ ಅಂಧ್ರ ರೆವಿನ್ಯೂ ಬೋರ್ಡಿನ ಹಾಗೆ ಇದಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಆದರೂ, ನನ್ನ ಅಭಿಪ್ರಾಯದಲ್ಲಿ ವ್ಯವಸಾಯದ ಪೋರ್ಟ್‌ಫೋಲಿಯೋ ಏಗೆ ಇದನ್ನೂ ವಹಿಸಿ ಎಷ್ಟೋ ದುಡ್ಡು ಉಳಿಸಬಹುದು. ಈ ಹಣವನ್ನು ರಚನಾತ್ಮಕ ಕೆಲಸಕಾರ್ಯಗಳಿಗೆ ಉಪಯೋಗಿಸುವುದಕ್ಕೆ ಅವಕಾಶವಾಗುತ್ತದೆಂದು ನಾನು ಹೇಳಬಯಸುತ್ತೇನೆ.

ರೆವಿನ್ಯೂ ಮಂತ್ರಿಗಳು ವರ್ಗಮಾಡುವ ಕೆಲಸ ವನ್ನಾದರೂ ಸರಿಯಾಗಿ ಮಾಡುತ್ತಿದ್ದಾರೆಯೇ ಎಂದರೆ—ಒಂದು ತಾಲ್ಲೂಕಿನಲ್ಲಿ ಒಬ್ಬ ಅಮಲ್ದಾರರನ್ನು ವರ್ಗಮಾಡಿದರೆ ಅಲ್ಲಿಗೆ ಬೇರೆ ಅಮಲ್ದಾರರು ಆರು, ಎಂಟು ತಿಂಗಳಾದರೂ ಬರುವುದಿಲ್ಲ. ಈ ರೀತಿ ನನ್ನ ತಾಲ್ಲೂಕಿನಲ್ಲೇ ಆಗಿದೆ. ವರ್ಗ ಮಾಡುವುದರಲ್ಲೂ ಕೂಡ, ಕೆಲಸ ಚುರುಕಿನಿಂದ ನಡೆಸದೆ ಹೋದರೆ ಮತ್ತಾವ ಕೆಲಸವನ್ನು ಅವರು ಚುರುಕಿನಿಂದ ನಡೆಸುತ್ತಾರೋ ಗೊತ್ತಿಲ್ಲ. ಆದ್ದರಿಂದ Agriculture ಮತ್ತು Revenue ಮಂತ್ರಿಗಳ ಪೋರ್ಟ್‌ಫೋಲಿಯೋವನ್ನು club ಮಾಡಿದರೆ ಒಳ್ಳೆಯದು. ಇದರಿಂದ ನಮ್ಮ ರಾಜ್ಯದಲ್ಲಿ ದುಡ್ಡನ್ನು ಉಳಿತಾಯ ಮಾಡಬಹುದೆಂದು ನನ್ನ ಭಾವನೆ.

ಈ ವಿಚಾರವಿರಲಿ. ದರಖಾಸ್ತು ಕೊಡುವ ವಿಚಾರವನ್ನು ತೆಗೆದುಕೊಂಡರೂ ಬೇಕಾದಷ್ಟು Local ಅಧಿಕಾರಿಗಳ ಹತ್ತಿರ ಚೌಕಾಸಿ ನಡೆಯುತ್ತಿದೆ. ಈ ನಂದರ್ಭದಲ್ಲಿ ಒಂದು ವಿಷಯವನ್ನು ಈ ಸಭೆಯ ಮುಂದೆ ತರದೆಇದ್ದರೆ ವಿಧಿಯಿಲ್ಲ. ಒಬ್ಬ ವ್ಯವಸಾಯಕ್ಕೆ ಒಂದು ಜಮಾನು ಬೇಕೆಂದು ಅರ್ಜಿ ಹಾಕಿದ. ಅದನ್ನು ಕೊಡುವುದಕ್ಕಾಗುವುದಿಲ್ಲವೆಂದೂ, ಗ್ರಾಮದವರೆಲ್ಲರೂ ವಿರೋಧವಾಗಿದ್ದಾರೆಂದೂ ಪಟೇಲನಿಂದ ರಿಪೋರ್ಟ್‌ಆಗಿ ತೀರ್ಮಾನವಾಯಿತು. ಆದರೆ, ಮರುಕ್ಷಣದಲ್ಲೇ ಮತ್ತೊಬ್ಬ ಅರ್ಜಿಹಾಕಿ ರೆವಿನ್ಯೂ ಕಮಿಷನರ ಮೂಲಕ ಪಡೆದುಕೊಂಡ. ಆದರೆ actual ಆಗಿ ಪಡೆಯುವುದಕ್ಕೆ ಹೋದಾಗ ಅದನ್ನು ಕೊಡಲಿಲ್ಲ. ಅದರ ಮೇಲೆ ಆ ಮನುಷ್ಯ transfer ಆಗುವತನಕ ನುಮ್ಮನೆ ಇದ್ದು ಸಣ್ಣಪುಟ್ಟ ಅಧಿಕಾರಿಗಳನ್ನು ಕೈಯಲ್ಲಿ ಹಾಕಿಕೊಂಡು ದೊರಕಿಸಿಕೊಂಡನು. ಹೀಗಾದರೆ ನ್ಯಾಯ ದೊರಕಿಸುವುದು ಯಾವ ರೀತಿ? ಮಂತ್ರಿಗಳಿದ್ದಾರೆ, ಸೆಕ್ರೆಟೆರಿಯವರಿದ್ದಾರೆ, ಡೆಪ್ಯುಟಿ ಕಮಿಷನರ್ ಇದ್ದಾರೆ. ಇಷ್ಟೊಂದು ಪ್ಯಾರಾಫರ್ನೀಲಿಯಾ ಇದ್ದರೂ ಇಂಥ ಕೆಲಸಗಳಲ್ಲಿ ನ್ಯಾಯದೃಷ್ಟಿಯಿಂದ ನಾವು ವರ್ತಿಸದೆಹೋದರೆ ನಾವು ಇನ್ನೇನುಮಾಡುವುದಕ್ಕೆ ಸಾಧ್ಯ?

ಮತ್ತೊಂದು ವಿಚಾರ. ಸ್ವಾಮಿ, ನಮಗೆ ದೇಶದಲ್ಲಿ ಆಹಾರದ ಅಭಾವವಿದ್ದಾಗ Food Inspector ಗಳ ಕೆಲಸಕ್ಕೆ ಅನೇಕ ಜನರನ್ನು Non-S.S.L.C.ಯವರನ್ನೂ ಕೂಡ ತೆಗೆದುಕೊಂಡರು. ಅವರುಗಳು ಹತ್ತಾರು ವರ್ಷಗಳು Food Inspectorಗಳಾಗಿ ಕೆಲಸ ಮಾಡಿದ್ದಾರೆ. ಅಂಥವರನ್ನೀಗ degrade ಮಾಡಿ Second Division clerkಗಳಾಗಿ ಕಳುಹಿಸಿ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ದ್ದಾರೆ. ಹತ್ತು ಹದಿನೈದು ವರ್ಷಗಳು ನಿಷ್ಠೆಯಿಂದ ಕೆಲಸಮಾಡಿದ ಈ Food Inspectorಗಳಿಗೆ promotion ಕೊಡುವುದರ ಬದಲು de-promotion ಮಾಡಿರುವುದು ಸಾಧುವಲ್ಲ. ಅವರಿಗೆ ನ್ಯಾಯ ದೊರಕಿಸುವ ದೃಷ್ಟಿಯಿಂದ ಅವರನ್ನು Revenue Inspectorಗಳಾಗಿ ಮಾಡುವುದು ಒಳ್ಳೆಯದು.

ಇನಾಂ ರದ್ದಿಯಾತಿಯ ವಿಷಯ. ಇದರ ಬಗ್ಗೆ ಆಕ್ಟ್ ಆಗಿ ಐದಾರು ವರ್ಷವಾಯಿತು. ಇದುವರೆಗೂ ಆ ಕೆಲಸಮಾತ್ರ ಮುಂದುವರಿದಿಲ್ಲ. ಬಿಲ್ ಏನೋ ಪಾಸಾಗಿ ಆಕ್ಟ್ ಆಯಿತು. ಇಷ್ಟು ನಿಧಾನ ವೇಕೋ ಗೊತ್ತಿಲ್ಲ. ಬೇಕಾದಷ್ಟು ಸಿಬ್ಬಂದಿಯಿಟ್ಟು ಯಾವುದಾದರೂ ಕೆಲಸ ನಡೆಸುತ್ತೀರೆಂದು ನಂಬಿದ್ದೇನೆ. ಇದು ಬಹು ಮುಖ್ಯವಾದ ಕೆಲಸ. ಇಷ್ಟು ಉದಾಸೀನಮಾಡಿದರೆ ಎಷ್ಟು ಅನಾಹುತವಾಗುತ್ತದೆಂಬುದನ್ನು ಯೋಚನೆಮಾಡಿ. ಈ ಮಧ್ಯೆ ಇನಾಂದಾರರುಗಳು ಗ್ರಾಮಠಾಣ್ ಮುಂತಾದ ಪ್ರದೇಶಗಳನ್ನು ಹರಾಜು ಹಾಕಿ ಒಬ್ಬರಿಗೊಬ್ಬರು ಹೋರಾಟವಾಡಿ ಹೈಕೋರ್ಟಿನವರೆಗೂ ಹೋಗಿರುವ ಸಂದರ್ಭಗಳಿವೆ. ಆದ್ದರಿಂದ ನಿಧಾನಮಾಡುವುದು ಸರಿಯಲ್ಲವೆಂದು ಹೇಳಬಯಸುತ್ತೇನೆ.

ಡಿವಿಜನಲ್ ಕಮಿಷನರ ವಿಚಾರ ಅನೇಕರು ಹೇಳಿದ್ದಾರೆ. ಏಕೆ ಈ ಹುದ್ದೆಯನ್ನಿಟ್ಟಿದ್ದಾರೋ ಗೊತ್ತಿಲ್ಲ. ನೇರವಾಗಿ ತಾಲ್ಲೂಕಿನಿಂದ ಸರ್ಕಾರಕ್ಕೆ ಒಂದು ಕಾಗದ ಸೇರುವುದಕ್ಕೆ ಬದಲಾಗಿ ಡಿವಿಜನಲ್ ಆಫೀಸರಿಗೆ ಹೋಗಿ ಕೊಳೆಬಿದ್ದು ಅಲ್ಲಿಂದ ಬರಬೇಕಾದರೆ 7-8 ತಿಂಗಳು ಹಿಡಿಯುತ್ತದೆ. ಏಕೆ ಈ station ಇರಬೇಕೋ ಗೊತ್ತಿಲ್ಲ. ಆದಷ್ಟು ಬೇಗನೆ ತೆಗೆಯುವುದು ಉತ್ತಮವೆಂದು ನನ್ನ ಭಾವನೆ.

ಆಮೇಲೆ, ಕ್ಷಾಮನಿವಾರಣಾ ಏರ್ಪಾಡುಗಳು. ಕ್ಷಾಮನಿವಾರಣಾ ಏರ್ಪಾಡು ಮಾಡುವುದರಲ್ಲಿ ನಮ್ಮಲ್ಲಿ ಒಂದು ರೀತಿಯ ತಾತ್ಸಾರ ಮನೋಭಾವನೆ ಮುಂದುಬುದ್ಧಿ ಬೆಳೆದಿದೆ. ನಾವು Irrigation ವಿಚಾರದಲ್ಲಿ ಮುಖ್ಯವಾಗಿ ಸಣ್ಣಪುಟ್ಟ ಕೆರೆಗಳಿಗೆ ಗಮನಕೊಡುತ್ತಿಲ್ಲ. ಇಂಡಿಯಾ ಸರ್ಕಾರದವರಲ್ಲಿ ಬೇಕಾದಷ್ಟು ದುಡ್ಡಿದೆ. ಆದರೂ ಕೆಲಸ ತಾವು ನಡೆಸುತ್ತಿಲ್ಲ. ಮಧ್ಯೆಮಧ್ಯೆ bottleneck ಗಳು ಬೇಕಾದಷ್ಟಿವೆ. Administration sanction ಆಗಬೇಕು; ಮೇಲೆ Technical sanction ಬೇರೆ ಆಗಬೇಕು. ಈ ರೀತಿಯಾಗಿ ವಿಪರೀತವಾದ delay ಆಗುತ್ತಿದೆ. ಈ ಅನಿವಾರ್ಯಗಳೆಲ್ಲವನ್ನು ತೆಗೆದು ಸಲೀಸಾಗಿ estimate ಆದಕೂಡಲೆ ಸಣ್ಣಪುಟ್ಟ ನೀರಾವರಿಗಳನ್ನು ಮಾಡಿಸುವುದು ಬಹಳ ಒಳ್ಳೆಯದು. ನಮ್ಮ ತಾಲ್ಲೂಕಿನಲ್ಲಿ (ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ) ಕಾವೇರಿ, ಹೇಮಾವತಿ ಎರಡು ನದಿಗಳೂ ಹರಿಯುತ್ತವೆ. ಇಂಥ ಎರಡು ದೊಡ್ಡ ಜೀವನದಿಗಳು ಹರಿಯುತ್ತಿರುವಾಗ ಅಲ್ಲಿ ಎರಡುಮೂರು ಹೋಬಳಿಗಳು ಯಾವಾಗಲೂ ಕ್ಷಾಮಕ್ಕೆ ತುತ್ತಾಗುತ್ತಿರುತ್ತವೆಂದರೆ ಆಶ್ಚರ್ಯವಾಗುತ್ತದೆ. ಕನ್ನಂಬಾಡಿಕಟ್ಟೆ ಕಟ್ಟಿದಿರಿ. 33 ಗ್ರಾಮಗಳವರ ಜಮೀನುಗಳು ಮುಳುಗಡೆಯಾಗಿ ಅವರು ಭಿಕಾರಿಗಳಾಗಿದ್ದರೂ ಇದನ್ನು ನೋಡಿಸೆ ಸುಮ್ಮನೆ ನೀರನ್ನು ಉಪಯೋಗಿಸುತ್ತಿರುವುದನ್ನು ನೋಡಿದರೆ, ಯಾರಾದರೂ ಯೋಚನಾಶಕ್ತಿಯಿರುವವರು ಹೀಗೆ ಮಾಡುತ್ತಾರೆಯೇ ಎನ್ನಿಸುತ್ತದೆ. Practical ಆಗಿ ಎಲ್ಲೆಲ್ಲಿ ಏನೇನು ಮಾಡಬೇಕೆಂಬುದನ್ನು ಯೋಚನೆಮಾಡಬೇಕು. ಈಗಲಾದರೂ ಸರ್ವೆಮಾಡಿಸಿ ಎಲ್ಲೆಲ್ಲಿ ನೀರಾವರಿಗೆ ಸಾಧ್ಯವಿದೆಯೆಂಬುದನ್ನು ಪರಿಶೀಲಿಸಿ ತಕ್ಕ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

*Sri J. H. SHAMSUDDIN (Honawar).—Mr. Speaker, Sir, I rise to support the demand under 'Land Revenue'. It is generally accepted that this is one of the oldest departments of Government.

I would like to have certain clarifications about the budget heads in the particular demand so that the demand may be more intelligible to me. There are certain items which it is difficult for me to understand. I may refer to page 14 of the Budget Memorandum. There, certain explanations are given which are self-explanatory. For instance, under the head 'Sale of Government Estates', it is stated that a "decrease of Rs. 0·89 lakh is anticipated under this head during the current year." No reason has been given for the decrease. On the contrary, I find that there should have been an increase by sale of Government estates. Since there is pressure on land and there is a greater demand for land, if Government lands are sold by public auction it will bring more money to Government.

Then I may refer to page 15 of the Budget Memorandum under 'Miscellaneous'. There also a decrease in revenue is expected. but I feel that if it is properly handled there will be an increase.

Then, there are certain items for which it would be have been better if the department had given explanatory notes. I may refer to page 11 of the Budget Estimates and there we find the term 'Rusooms'. I think it refers to Hyderabad area and it means 'fees'. Being a pleader I know that bill of costs is always referred to as 'Vakalatnama Rusooms', but I think it would have been better if an explanation had been given to this term.

Then there is a provision for 'Commission payable to Inamdars for collecting water rate from Kadim tenants'. I would like to ask the Minister whether we still continue with this system of private agency for collection of these fees. Can we not introduce a departmental system of collection of

fees and make provision for it in the budget? There are also similar other terms which require explanation. On account of the short time at my disposal I am not going into them now.

Then I would like to refer to our time-honoured method of collection of revenue. Our land policy should be such that we get the maximum return from land. I know that this will have to await a decision on our land policy because then the intermediaries will be abolished and the tenants will be brought in direct contact with Government. I would like Government to bear this question in mind when the new land policy is framed and to see whether the old method of collecting land revenue cannot be reorganised in such a manner that the cost of collection is minimised and we get the maximum rent. One of the suggestions that may be offered is the collection of agricultural income tax, but there are certain difficulties for that. Apart from that, there is also another theory that since the land belongs to the State and if the tiller of the soil gets it from the State, apart from the fact as to whether he gets any income from cultivation or not, there should be a change on the land for the mere use of it. I think this consideration should be borne in mind at the time of framing the new land policy and the policy of land revenue collection under the new system.

I was surprised to hear the criticism of the Hon'ble Member Sri Madappa that there was no provision for payment of compensation to inamdars and for implementation of the Inam Abolition Act. I may refer him to page 15 of the Budget Memorandum where under the head 'Expenditure' it is stated that provision has been made for payment of compensation to inamdars on abolition of inams. Perhaps, it escaped his notice or he did not take the trouble of going through the explanatory note.

Then I may refer to the land disposal policy of the Revenue Department and the Forest Department. This is a very important question. I think several suggestions have been made on the floor of this House about land disposal. There are areas where there are more lands and less population. In the Malnad area to which I belong, there are surplus lands and de-populated areas also. The question of the rehabilitation of these areas in Malnad is an important one. If lands are granted to individuals, there are certain inherent difficulties due to geographical situation, lack of communications, malaria, wild pig pest etc. These deter the individual from taking the lands in Malnad area. So we may think of a system of colonisation of those areas by a group of people. We must encourage groups of people to migrate from places where there is pressure on land. For instance, in the Malnad area in the districts of North Kanara and South Kanara there is pressure on land on the coastal belt, but there is no pressure on land so for as the interior part is concerned. There is, therefore, an inertia on the part of the peasants to move from the coastal belt to the interior region and so some collective drive is necessary in order to persuade those people to give up the coastal belt and migrate to the interior parts and take up cultivation there. That can be achieved by having a colonisation scheme because people would like to go to these areas in groups. A co-operative society for the purpose may not be quite suitable because there are certain difficulties in organising a co-operative society, but a collection of people can be induced to go there and settle and cultivate the land individually having a sense of collective security from wild pests and natural diseases like malaria which are common in that part. I would like Government to consider a colonisation scheme especially for the Malnad area. For this purpose Government may create a separate Division for the Malnad area for the purpose of the colonisation scheme for the unoccupied areas in Malnad.

4-30 P.M.

MR. DEPUTY SPEAKER.—The Minister will reply.

SRI C. M. ARUMUGHAM (Kolar Gold Fields).—I rise to a point of order. The other day the Speaker was kind enough

(SRI C. M. ARUMUGHAM)

to allow Sri J. B. Mallaradhya to make a statement in the House regarding the statement made by the Hon'ble Minister at a Press Conference when the House was in session regarding the policy of the Government so far as the portfolio of the Revenue Minister is concerned. In this connection both Sri C. J. Muckannappa and Sri M. C. Narasimhan have sent in a privilege motion. The Speaker has been kindly saying that he would give a ruling. I want to know—when there is a privilege motion pertaining to the question of the Revenue Department—whether it is in order to allow the Hon'ble Minister for Revenue to reply to this debate.

MR. DEPUTY SPEAKER.—I have called upon the Hon'ble Revenue Minister to reply. Regarding the privilege motion, I will see to it and consider.

SRI C. J. MUCKANNAPPA.—Sir, it is pertaining to the distribution of land that the Hon'ble Minister for Revenue made a statement to the Press. The privilege motion has not yet been ruled out. It is awaiting the ruling of the Chair. Now the Revenue Minister will make a statement to the House. There will therefore be two statements. Therefore it will be better if the Revenue Minister replies after the privilege motion is either ruled out or not. At this juncture if the Revenue Minister is allowed to make a statement what happens to the other statement? I wish to know the ruling of the Chair to the point raised by Sri C. M. Arumugham. When there are two statements, both made by the Revenue Minister, this House will be in a fix. I leave the matter to the Chair to take it in the correct light and say whether the point of order raised is correct or not.

SRI M. P. PATIL.—May I say a few words in this connection?

SRI C. J. MUCKANNAPPA.—Sir, we do not question the ruling of the Chair. But regarding the privilege motion. . . .

MR. DEPUTY SPEAKER.—Regarding the privilege motion, I will consider.

SRI C. J. MUCKANNAPPA.—I want the ruling of the Chair regarding the point of order raised by Sri C. M. Arumugham.

MR. DEPUTY SPEAKER.—I have said that I would consider it later.

SRI C. J. MUCKANNAPPA.—Is there no point of order?

MR. DEPUTY SPEAKER.—There is no point of order now. The Hon'ble Minister for Revenue may reply to the debate.

*SRI M. P. PATIL.—Sir, I am thankful to the Hon'ble Members for making useful suggestions for improving the administration of the Revenue Department. However, I am sorry to note that some of the suggestions were based on misunderstanding on the part of some of the members, and therefore I would like to explain as to what is being done to improve the things in the Department. First, I shall take up the question of inam abolition.

